# ಶ್ರೀನಿವಾಸಕಲ್ಯಾಣ



ರಚನೆ
ಶ್ರೀ ರಾಘವೇಂದ್ರಗುರುವಂಶಭೂಷಣಂ
**ರಾಜಾ ಶ್ರೀ ಗುರುರಾಜಾಚಾರ್ಯರು**

ಶ್ರೀಸುಯಮಿ ರಾಘವೇಂದ್ರ
ಕೃಪಾಶ್ರಿತಂ

ಕಮಲೇಶ ಕುಸುಮ

ಸಾಹಿತ್ಯ ಸಾಮ್ರಾಜ್ಯಂ–150

# ಶ್ರೀನಿವಾಸಕಲ್ಯಾಣ

ರಚನೆ
ಶ್ರೀರಾಘವೇಂದ್ರಗುರುವಂಶಭೂಷಣಂ
**ರಾಜಾ ಶ್ರೀ. ಗುರುರಾಜಾಚಾರ್ಯ**

ಪ್ರಕಾಶಕರು
**ಶ್ರೀ ಸುಯಮೀರಾಘವೇಂದ್ರ ಸಂಶೋಧನ ಕೇಂದ್ರ**
**ಸಾಹಿತ್ಯ ಸಾಮ್ರಾಜ್ಯ ಪ್ರಕಾಶನ**
ನಂಜನಗೂಡು, ಬೆಂಗಳೂರು
2018

# ಶ್ರೀನಿವಾಸಕಲ್ಯಾಣ

## (ಶ್ರೀ ವೆಂಕಟೇಶ ಮಹಾತ್ಮೆಯ ಸಾರ)

-ರಾಜಾ ಶ್ರೀ ಗುರುರಾಜಾಚಾರ್ಯ

ತಿರುಪತಿ ಶ್ರೀನಿವಾಸದೇವರು ಸಕಲ ಸನ್ಮಂಗಳಪ್ರದನಾದ ಸರ್ವೋತ್ತಮ ದೇವರು. ಸಕಲ ವೈದಿಕ ವಾಙ್ಮಯ, ಪುರಾಣಾದಿಗಳು ಶ್ರೀನಿವಾಸನೇ ಜಗಜ್ಜನ್ಮಾದಿಕಾರಣನಾದ, ಸಕಲ ಗುಣಪೂರ್ಣನಾದ, ದೋಷವಿದೂರನಾದ, ಸರ್ವಸ್ವತಂತ್ರನಾದ, ರಮಾಬ್ರಹ್ಮರುದ್ರೇಂದ್ರಾದಿ ಸುರವರಪೂಜ್ಯನೆಂದೂ ಚತುರ್ವಿಧ ಪುರುಷಾರ್ಥಪ್ರದನಾದ ಪರಮಾತ್ಮನೆಂದೂ, ಅವನನ್ನು ಮಾಹಾತ್ಮ್ಯ ಜ್ಞಾನಪೂರ್ವಕವಾಗಿ ಆರಾಧಿಸುವುದರಿಂದ ಸುಪ್ರಸನ್ನನಾದ ಶ್ರೀಹರಿಯು ಐಹಿಕಾಮುಷ್ಮಿಕ ಸುಖ-ಸಂಪತ್ತು, ಸಂತಾನ-ಸನ್ಮಂಗಳಗಳನ್ನು ಕರುಣಿಸಿ ಕಾಪಾಡುತ್ತಾನೆಂದೂ ಸಾರುತ್ತಿವೆ. ನವರಾತ್ರ್ಯೋತ್ಸವ ಪ್ರಯುಕ್ತ ಮಹಾಮಹಿಮನಾದ ಶ್ರೀನಿವಾಸನ ಕಲ್ಯಾಣ ಮಹೋತ್ಸವವನ್ನು ನಿರೂಪಿಸುವ ಭವಿಷ್ಯೋತ್ತರ ಪುರಾಣಾಂತರ್ಗತವಾದ ವೆಂಟೇಶಮಾಹಾತ್ಮ್ಯ ಪುರಾಣ ಸಾರವನ್ನು ಪುರಾಣಾನುವಾದ ಮಾಡುವವರಿಗೂ ಸ್ವತಃ ಪಾರಾಯಣ ಮಾಡುವವರಿಗೂ ಅನುಕೂಲವಾಗಲಿ ಎಂಬ ಉದ್ದಿಶ್ಯದಿಂದ 'ಪರಿಮಳ ಪ್ರೇಮಿ'ಗಳಿಗೆ ಚಿರಪರಿಚಿತರಾದ ರಾಜಾ ಶ್ರೀ ಗುರುರಾಜಾಚಾರ್ಯರು ಪರಿಮಳ ವಾಚಕರಿಗಾಗಿ ಬರೆದು ಕಳಿಸಿದ್ದರು. ಇದನ್ನು ಪುಸ್ತಕರೂಪದಲ್ಲಿ ಪ್ರಕಟಿಸಿ ಭಗವದ್ಭಕ್ತರಿಗೆ ನೀಡಲು ಹರ್ಷಿಸುತ್ತೇವೆ.

-ಪ್ರಕಾಶಕರು

## ಮಂಗಳಾಚರಣಮ್

ಬ್ರಹ್ಮರುದ್ರಾದಿವಂದ್ಯಂ ತ್ವಾಂ ಭಜೇ ವೆಂಕಟನಾಯಕಮ್ ।
ನಿವಾರಯಾಶ್ವನಿಷ್ಟಾನಿ ಸಾಧಯೇಷ್ಟಾನಿ ಮಾಧವ ॥

ಪುಣ್ಯಭೂಮಿಯಾದ ಭರತವರ್ಷದಲ್ಲಿ ಘೋರವಾದ, ಪಾಪಭೂಯಿಷ್ಠವಾದ ಮನುಕುಲದ ಉದ್ಧಾರಕ್ಕಾಗಿ ಪರಮ-ಕೃಪಾಳುಗಳಾದ ಭಗವಾನ್ ವೇದವ್ಯಾಸದೇವರು ವೇದವಿಭಾಗ-ಪೂರ್ವಕವಾಗಿ ವೇದಾರ್ಥನಿರ್ಣಾಯಕ ಬ್ರಹ್ಮಮೀಮಾಂಸಾ-ಶಾಸ್ತ್ರವನ್ನು ರಚಿಸಿರುವುದರ ಜತೆಗೆ ಜನಸಾಮಾನ್ಯರ ಉದ್ಧಾರಕ್ಕಾಗಿ ಅನೇಕ ಪುರಾಣಗಳನ್ನು ರಚಿಸಿ ಮಹೋಪಕಾರ ಮಾಡಿದ್ದಾರೆ. ಅದರಲ್ಲಿ ಭವಿಷ್ಯೋತ್ತರ ಪುರಾಣದಲ್ಲಿ ಅಂತರ್ಗತವಾದ ಶ್ರೀ ವೆಂಕಟೇಶಮಾಹಾತ್ಮ್ಯವು ನಿಖಿಲ ಪ್ರಪಂಚದ ಕಲ್ಯಾಣಕ್ಕೂ, ಶ್ರೇಯಸ್ಸಿಗೂ ಕಾರಣವಾದ ಶ್ರೇಷ್ಠ ಗ್ರಂಥವಾಗಿದೆ. ಪುರಾಣ-ಪರಾಯಣರಾದ ಸೂತರು, ಶೌನಕಾದಿಗಳ ಅನುಗ್ರಹಕ್ಕಾಗಿ ಅದನ್ನು ನಿರೂಪಿಸಿದ್ದಾರೆ. ಅದರ ಸಾರವನ್ನೇ ಇಲ್ಲಿ ಅನುವಾದ ಮಾಡಿಕೊಡಲಾಗಿದೆ.

***ಶೌನಕರು :*** 'ಸ್ವಾಮಿ, ಸೂತರೇ, ನೀವು ಹೇಳಿದ ಶ್ರೀರಂಗ-ದೇವರ ಘಟಿಕಾಚಲಸ್ವಾಮಿಯ ಹಾಗೂ ಜಗನ್ನಾಥದೇವರ ಮಹಿಮೆಯನ್ನಾಲಿಸಿ ಸುಕೃತಿಗಳಾಗಿದ್ದೇವೆ. ಈಗ ಶ್ರೀವೆಂಕಟಾ-ಚಲಪತಿಯಾದ ಶ್ರೀಹರಿಯ ಮಹಿಮೆಯನ್ನು ಕೇಳಲು ಆಶಿಸಿ-ದ್ದೇವೆ. ತಾವು ಅದನ್ನು ನಿರೂಪಿಸಿ ಅನುಗ್ರಹಿಸಬೇಕು' ಎಂದು ಪ್ರಾರ್ಥಿಸಿದರು. ಅದಕ್ಕೆ ಸೂತರು ಹೇಳಲಾರಂಭಿಸಿದರು.

***ಸೂತರು :*** ಮುನಿವರ್ಯರೇ, ಆನಂದದಾಯಕ ಪ್ರಶ್ನೆಯನ್ನೇ ಕೇಳಿರುವಿರಿ. ಶ್ರೀವೇದವ್ಯಾಸರು ನನಗೆ ಉಪದೇಶಿಸಿದ ಕ್ರಮದಲ್ಲಿ

ನಿಮಗೆ ಹೇಳುತ್ತೇನೆ ಕೇಳಿ. ಪೂರ್ವದಲ್ಲಿ ಧರ್ಮಿಷ್ಠನಾದ ಜನಕ ರಾಜನು ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ಕುಶಕೇತುವೆಂಬ ತಮ್ಮನಿದ್ದನು. ಅವನ ಪತ್ನಿ ಬಹು ಪತಿವ್ರತೆಯು. ಆ ದಂಪತಿಗಳಿಗೆ ಮೂರು ಜನ ಸುಪುತ್ರಿಯರಿದ್ದರು. ಜನಕರಾಜನಿಗೆ ಜಾನಕಿ ಎಂಬ ಶ್ರೇಷ್ಠ ಪುತ್ರಿಯಿದ್ದಳು. ಹೀಗೆ ಜನಕರಾಜನು ಪುತ್ರಿ, ಅನುಜ, ಅವನ ಪುತ್ರಿಯರೊಡನೆ ಸುಖವಾಗಿ ರಾಜ್ಯಭಾರ ಮಾಡುತ್ತಿದ್ದನು. ಒಮ್ಮೆ ಜನಕರಾಜನು 'ನಾನು ಸರ್ವದಾ ಸುಖವಾಗಿಯೇ ಇರಬೇಕು, ದುಃಖಗಳನ್ನು ಈ ಕಣ್ಣಿನಿಂದ ನೋಡಬಾರದು' ಎಂದು ಇಚ್ಛಿಸಿದನು. ಆ ಸಾಧುವೂ ಶಾಸ್ತ್ರಸಮ್ಮತವಲ್ಲದುದೂ ಆದ ಆ ಅಪೇಕ್ಷೆ ಮಾಡಿದ್ದರಿಂದ ಭಗವಂತನು ಅವನಿಗೆ ದುಃಖಪ್ರದರ್ಶನ ಮಾಡಿದನು. ಜನಕರಾಜನ ತಮ್ಮನಾದ ಕುಶಕೇತುವು ಮೃತನಾದನು. ಅವನ ಪತ್ನಿಯು ಪತಿಯೊಡನೆ ಸಹಗಮನ ಮಾಡಿದಳು. ಅನಾಥರಾದ ಮಕ್ಕಳನ್ನು ಕಂಡು ಕಡುದುಃಖಿತನಾದ ಜನಕರಾಜನು ಅನ್ನಾಹಾರಗಳನ್ನು ತ್ಯಜಿಸಿದನು. ಆಗ ದೈವಯೋಗದಿಂದ ಕುಲಪುರೋಹಿತರೂ, ವಾಮದೇವ ಮುನಿಗಳ ಸಹೋದರರೂ ಆದ ಶತಾನಂದರು ಮಿಥಿಲೆಗೆ ಬಂದರು. ಅರ್ಘ್ಯಪಾದ್ಯಾದಿಗಳಿಂದ ಅವರನ್ನು ಪೂಜಿಸಿ ಕುಶಲ ಪ್ರಶ್ನೆ ಮಾಡಿ ಅನಂತರ ಜನಕರಾಜನು ತನಗೆ ಪ್ರಾಪ್ತವಾದ ದುಃಖವನ್ನು ಶತಾನಂದರಲ್ಲಿ ವಿಜ್ಞಾಪಿಸಿದನು. ಆಗ ಶತಾನಂದರು ಹೀಗೆ ಹೇಳಿದರು.

**ಶತಾನಂದರು :** ರಾಜನ್, ಕಲಿಯುಗದಲ್ಲಿ ವೆಂಕಟಗಿರಿ ಮಾಹಾತ್ಮ್ಯೆಯನ್ನು ಶ್ರವಣ ಮಾಡುವುದರಿಂದ ಸರ್ವಪಾಪವೂ ಪರಿಹಾರವಾಗುವುದು. ನಿನ್ನ ಶತ್ರುನಾಶ, ಪುತ್ರಿಯರ ವಿವಾಹ, ಸಕಲ ಶ್ರೇಯಸ್ಸುಗಳೂ ಅದರ ಶ್ರವಣದಿಂದ ದೊರಕುತ್ತದೆ. "ಕೃತೇ

ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಮಂಜನಾಚಲಮ್ । ದ್ವಾಪರೇ ಶೇಷಶೈಲೇಶಿ ಕಲೌ ಶ್ರೀವೆಂಕಟಾಚಲಮ್ ॥" ಈ ಪರ್ವತಕ್ಕೆ ಕೃತಯುಗದಲ್ಲಿ ವೃಷಭಾಚಲವೆಂದೂ, ತ್ರೇತಾಯುಗ- ದಲ್ಲಿ ಅಂಜನಾಚಲವೆಂದೂ, ದ್ವಾಪರದಲ್ಲಿ ಶೇಷಾಚಲವೆಂದೂ, ಕಲಿಯುಗದಲ್ಲಿ ವೆಂಕಟಾಚಲವೆಂದೂ ಯುಗಭೇದದಿಂದ ಹೆಸರುಂಟಾಗಿದೆ. ಕೃತಯುಗದಲ್ಲಿ ವೃಷಭವೆಂಬ ರಾಕ್ಷಸನು ಈ ಪರ್ವತದಲ್ಲಿದ್ದ ಋಷಿಮುನಿಗಳಿಗೆ ಕಷ್ಟಕೊಡುತ್ತಿದ್ದನು. ಅದನ್ನು ತಾಳದೆ ಮುನಿಗಳು ಶ್ರೀಹರಿಗೆ ಮೊರೆಹೋದರು. ಆಗ ಹರಿಯು ಪ್ರತ್ಯಕ್ಷನಾಗಿ ಅಭಯವಿತ್ತು ವೃಷಭಾಸುರನೊಡನೆ ಘೋರ ಯುದ್ಧ ಮಾಡಿ ವೃಷಭಾಸುರನು ತೋರಿದ ಮಾಯಾಯುದ್ಧಕೌಶಲದಿಂದ ಹರ್ಷಿಸಿ ಅವನ ಶಿರವನ್ನು ಚಕ್ರದಿಂದ ತರಿಯಲು ಸಿದ್ಧನಾಗಲು ಸಾಷ್ಟಾಂಗವೆರಗಿದ ರಾಕ್ಷಸನು "ಸ್ವಾಮಿ, ನಿನ್ನ ಚಕ್ರದ ಪ್ರಭಾವ ಕೇಳಿದ್ದೇನೆ. ಆದರಿಂದ ಮೃತನಾಗಿ ನಿನ್ನ ಮಂದಿರವನ್ನೇ ಸೇರು- ತ್ತೇನೆ. ಈ ಪರ್ವತಕ್ಕೆ ನನ್ನ ಹೆಸರು ಪ್ರಸಿದ್ಧವಾಗುವಂತೆ ಅನು- ಗ್ರಹಿಸು" ಎಂದು ಪ್ರಾರ್ಥಿಸಿದನು. ಶ್ರೀಹರಿಯು ಅಸುರನಿಗೆ ಅದರಂತೆ ಅಭಯವಿತ್ತು ಚಕ್ರದಿಂದ ಅವನನ್ನು ಸಂಹರಿಸಿ ಮುನಿಗಳ ಕಷ್ಟ ಪರಿಹರಿಸಿದನು. ಈ ಕಾರಣದಿಂದ ಇದಕ್ಕೆ ವೃಷಭಾಚಲವೆಂದು ಹೆಸರಾಯಿತು. ದ್ವಾಪರದಲ್ಲಿ ಕಪಿಶ್ರೇಷ್ಠನಾದ ಕೇಸರಿಯ ಪತ್ನಿಯಾದ ಅಂಜನಾದೇವಿಯು ಮಕ್ಕಳಿಲ್ಲದೆ ಮತಂಗ ಮುನಿಗಳ ಆದೇಶದಂತೆ ಪುತ್ರಪ್ರಾಪ್ತಿಗಾಗಿ ಪತಿಯ ಆಜ್ಞೆಯನ್ನು ಪಡೆದು ಇಲ್ಲಿ ಹನ್ನೆರಡು ವರ್ಷ ತಪಸ್ಸನ್ನಾಚರಿಸಿ ಶ್ರೀವಾಯು- ದೇವರ ಅನುಗ್ರಹದಿಂದ ಹನೂಮಂತನೆಂಬ ಪುತ್ರನನ್ನು ಪಡೆದ- ಳಾದ್ದರಿಂದ ತ್ರೇತಾಯುಗದಲ್ಲಿ ಈ ಪರ್ವತವು ಅಂಜನಾಚಲ- ವೆಂದು ಪ್ರಸಿದ್ಧವಾಯಿತು. ದ್ವಾಪರಯುಗದಲ್ಲಿ ಒಮ್ಮೆ ಶ್ರೀ ಹರಿಯು ವೈಕುಂಠದಲ್ಲಿ ಲಕ್ಷ್ಮೀಸಹಿತನಾಗಿ ಏಕಾಂತದಲ್ಲಿದ್ದನು.

ಆಗ ಸ್ವರ್ಣದಂಢಧಾರಿಯಾಗಿ ಶೇಷದೇವರು ಬಾಗಿಲು ಕಾಯುತ್ತಿದ್ದರು. ಅದೇ ಸಮಯಕ್ಕೆ ಶ್ರೀ ವಾಯುದೇವರು ಶ್ರೀಹರಿಯ ದರ್ಶನಕ್ಕಾಗಿ ವೈಕುಂಠಕ್ಕೆ ಬಂದರು. ಶೇಷದೇವರು ಅವರನ್ನು ಒಳಗೆ ಬಿಡದೆ ತಡೆದರು. ಆಗ ವಾಯು-ಶೇಷರಲ್ಲಿ ತಾನು ಅಧಿಕ, ತಾನೇ ಶ್ರೇಷ್ಠನೆಂದು ವಿವಾದವಾಯಿತು. ಈ ಗದ್ದಲವನ್ನು ಕೇಳಿದ ಲಕ್ಷ್ಮೀದೇವಿಯು ಶ್ರೀನಾರಾಯಣನಿಗೆ ಅರುಹಿದಳು. ಆಗ ಶ್ರೀಹರಿಯು ಹೊರಬಂದು ಆವರೀರ್ವರ ವಿವಾದವನ್ನಾಲಿಸಿದರು. ವಾಯುದೇವರು ಭಕ್ತಿಯಿಂದ ನಮಿಸಿ ವಿನೀತರಾಗಿ ನಿಂತರು. ಶ್ರೀಹರಿಯು ಅವರೀರ್ವರ ಬಲಪರೀಕ್ಷೆ ಮಾಡುವುದರ ಮೂಲಕ ಜಗಳವನ್ನು ಪರಿಹರಿಸಲು ನಿಶ್ಚಯಿಸಿ ಶೇಷದೇವರನ್ನು ನೋಡಿ ಹೀಗೆ ಹೇಳಿದನು. "ನವಾಙ್ಮಾತ್ರೇಣ ಪೌರುಷ್ಯಂ ಕ್ರಿಯಾಕೇವಲಮುತ್ತಮಂ ॥" ಶೇಷ ! ಕೇವಲ ಮಾತಿನ ಗರಿಮೆಯಿಂದೇನೂ ಪ್ರಯೋಜನವಿಲ್ಲ. ಕೃತಿಯಲ್ಲಿ ನಿಮ್ಮ ಮಹತ್ತ್ವ ತೋರಿದಲ್ಲಿ ಅದು ಯೋಗ್ಯವಾಗುವುದು. ಇಲ್ಲಿಯೇ ಉತ್ತರದಲ್ಲಿರುವ ಆನಂದಾದ್ರಿಯನ್ನು ನಿನ್ನ ದೇಹವೆಂಬ ಹಗ್ಗದಿಂದ ಬಿಗಿಯಾಗಿ ಸುತ್ತಿ ಕುಳಿತುಕೋ. ವಾಯುದೇವನು ಅದನ್ನು ಆಕಾಶದಲ್ಲಿ ಹಾರಿಸಿಕೊಂಡು ಹೋಗಲಿ. ಅದರಿಂದ ಶ್ರೇಷ್ಠರಾರು ಎಂಬುದು ಸ್ಪಷ್ಟವಾಗುತ್ತದೆ" ಎಂದು ಅಪ್ಪಣೆ ಮಾಡಿದನು. ಅದರಂತೆ ಶೇಷ-ವಾಯುಗಳು ತಮ್ಮ ಬಲಪ್ರದರ್ಶನ ಮಾಡಿ-ದರು. ವಾಯುದೇವರ ಪಾದಾಂಗುಷ್ಠ ಸ್ಪರ್ಶಮಾತ್ರದಿಂದ ಶೇಷ-ಸಹಿತವಾದ ಆನಂದಾದ್ರಿಯು ಐವತ್ತೊಂದು ಸಾವಿರ ಯೋಜನ ವೇಗವಾಗಿ ಹೊರಟುಹೋಯಿತು. ತನ್ನ ಪುತ್ರನಿಗಾಗುತ್ತಿರುವ ಕಷ್ಟವನ್ನು ಕಂಡ ಮೇರುಪರ್ವತವು ವಾಯುದೇವರನ್ನು ಪ್ರಾರ್ಥಿಸಲು ಕರುಣಾಳುಗಳಾದ ಅವರು ಆನಂದಾದ್ರಿಯನ್ನು ಸುವರ್ಣಮುಖೀ ನದಿಯ ದಡದ ಮೇಲೆ ಇಳಿಸಿದರು. ಆಗ

"ಶೇಷೋ ಗತಮದಃ ಪಶ್ಚಾತ್ ತುಷ್ಟಾವ ಮರುತಾಂ ಪತಿಮ್ ॥" ಶೇಷದೇವರು ಬಲಗರ್ವರಹಿತರಾಗಿ ಶ್ರೀವಾಯುದೇವರಿಗೆ ನಮಸ್ಕರಿಸಿ ಸ್ತೋತ್ರ ಮಾಡಿ ಕ್ಷಮಾಯಾಚನೆ ಮಾಡಿದರು. ಆಗ ವಾಯುದೇವರು ಕಲಿಯುಗದಲ್ಲಿ ಶ್ರೀಹರಿಯು ಇಲ್ಲಿ ವಾಸಿಸುವನೆಂದು ಹೇಳಿ ಶೇಷದೇವರನ್ನು ಸಮಾಧಾನಪಡಿಸಿದರು. ಈ ಕಾರಣದಿಂದ ಈ ಪರ್ವತವು ದ್ವಾಪರದಲ್ಲಿ ಶೇಷಾಚಲವೆಂದು ಪ್ರಸಿದ್ಧವಾಯಿತು.

"ಜನಕ ಮಹಾರಾಜ, ಕಲಿಯುಗದಲ್ಲಿ ಇದಕ್ಕೆ ವೆಂಕಟಾಚಲವೆಂದು ಹೆಸರು ಬರಲು ಕಾರಣವನ್ನು ಹೇಳುತ್ತೇನೆ, ಕೇಳು. ಹಿಂದೆ ಕಾಳಹಸ್ತಿ ಎಂಬ ಪಟ್ಟಣದಲ್ಲಿ ಪುರಂದರನೆಂಬ ಸೋಮಯಾಜಿಯಿದ್ದನು. ಅವನಿಗೆ ಮಾಧವನೆಂಬ ಪುತ್ರನಿದ್ದನು. ಚಂದ್ರರೇಖೆ ಅವನ ಧರ್ಮಪತ್ನಿ. ವೇದವೇದಾಂಗಪಾರಂಗತನೂ, ಸದಾಚಾರರತನೂ ಆದ ಮಾಧವನು ಒಂದು ದಿನ ಪತ್ನಿಯೊಡನೆ ದಿವಾಸುರತವನ್ನು ಅಪೇಕ್ಷಿಸಲು ಆ ಸಾಧ್ವಿಯು ಅದು ಯೋಗ್ಯವಲ್ಲವೆಂದು ಹಿತನುಡಿಯನ್ನಾಡಿದರೂ ಮಾಧವ ಒಪ್ಪದೆ ಪತ್ನಿಯನ್ನು ವಿಹಾರಕ್ಕೆ ಕರೆದನು. ಆಗ ಅವನ ಪತ್ನಿಯು ಕುಶಾರ್ಥಿಯಾಗಿ ನೀವು ನದಿಯ ಕಡೆ ಹೋಗಿ, ನಾನು ನೀರಿನ ನೆಪದಿಂದ ಬರುತ್ತೇನೆಂದು ಹೇಳಿ ಅದರಂತೆ ಬಂದಳು. ಅದೇ ಸಮಯದಲ್ಲಿ ವನಾಂತರದಲ್ಲಿ ಶ್ವೇತವಸ್ತ್ರಧಾರಿಣಿಯೂ, ಸುಂದರಿಯೂ ಆದ ಕುಂತಳಾ ಎಂಬ ಚಂಡಾಲಕನ್ನೆಯು ಮಾಧವನ ದೃಷ್ಟಿಗೆ ಬಿದ್ದಳು. ಅವಳಲ್ಲಿ ಅನುರಕ್ತನಾದ ಮಾಧವನು ಹೆಂಡತಿಯನ್ನು ನೋಡಿ 'ಪ್ರಿಯೇ, ನಿನ್ನ ಪತಿಭಕ್ತಿಯನ್ನು ಪರೀಕ್ಷಿಸಲು ಇಲ್ಲಿಗೆ ನಿನ್ನನ್ನು ಬರಹೇಳಿದೆ. ನಿನ್ನ ಭಕ್ತಿಯನ್ನು ಕಂಡು ನನಗೆ ಸಂತೋಷವಾಗಿದೆ. ನೀನಿನ್ನು ಮನೆಗೆ ತೆರಳು' ಎಂದು ಹೇಳಲು ಹರ್ಷಿತಳಾದ

ಚಂದ್ರಲೇಖೆಯು ಮನೆಗೆ ಮರಳಿದಳು. ಅನಂತರ ಮಾಧವನು ಕುಂತಳೆಯ ಬಳಿಗೆ ಬಂದು ತನ್ನ ಆಶೆಯನ್ನವಳಿಗೆ ಅರುಹಿದನು. ಕುಂತಳೆಯು ಅನೇಕ ಧರ್ಮಶಾಸ್ತ್ರ, ನೀತಿ, ತತ್ತ್ವಗಳನ್ನು ಹೇಳಿ "ಚಂಡಾಲಸ್ತ್ರೀಸಂಗಮ ನಿನಗೆ ವಿಹಿತವಲ್ಲ"ವೆಂದು ಹೇಳಿ ಅವನಿಚ್ಛೆಯನ್ನು ನಿರಾಕರಿಸಿದರೂ ಮಾಧವನು ಕಾಮಾಂಧನಾಗಿ ಪತಂಗವು ದೀಪದಲ್ಲಿ ಬೀಳುವಂತೆ ಅವಳನ್ನು ಬಲಾತ್ಕರಿಸಿ ಅವಳೊಡನೆ ವಿಹರಿಸಿದನು. ಆಗ ಕುಂತಳೆಯು 'ಇಂದಿನಿಂದ ನೀನೇ ನನ್ನ ಪತಿ. ಬ್ರಾಹ್ಮಣ್ಯವನ್ನು ತ್ಯಜಿಸಿ ಚಂಡಾಲಕರ್ಮವನ್ನು ಸ್ವೀಕರಿಸು' ಎಂದು ಹೇಳಿದಳು. ಅದರಂತೆ ನಡೆದ ಮಾಧವನು ಅವಳೊಡನೆ ಹನ್ನೆರಡು ವರ್ಷ ಕಾಲ ಸಂಸಾರ ಮಾಡಿಕೊಂಡಿದ್ದನು. ದೇಹವು ಅಶಾಶ್ವತವಾದ್ದರಿಂದ ಕುಂತಳೆಯು ಕೃಷ್ಣವೇಣೀ ತಟದಲ್ಲಿ ಇರುವಾಗ ಪ್ರಾಣ ನೀಗಿದಳು. ದುಃಖದಿಂದ ಸಂತಪ್ತನಾದ ಮಾಧವನು ಹುಚ್ಚು ಹಿಡಿದವನಂತೆ ಅಲೆಯುತ್ತಾ ಉತ್ತರ ದೇಶದ ರಾಜರು ಶೇಷಾಚಲ ಯಾತ್ರೆ ಹೊರಟಿರುವುದನ್ನು ಕಂಡು ತಾನೂ ಅವರನ್ನು ಅನುಸರಿಸಿದನು. ಅವರು ಮಾಡಿದಂತೆ ಮಾಧವನು ಪರ್ವತದ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ, ಕ್ಷೇತ್ರವಿಽಯನ್ನು ನಿರ್ವಹಿಸಿ, ದೇವಋಷಿ ಪಿತೃಪೂಜೆ, ಪಾರ್ವಣ, ಮುಂತಾದುವುಗಳನ್ನು ಮಾಡಿ ಪರ್ವತದ ಶಿಖರಭಾಗಕ್ಕೆ ಬಂದಾಗ ಅವನ ಪಾಪಗಳೆಲ್ಲವೂ ಸುಟ್ಟು ಬೂದಿಯಾದವು. ನೊಣ ನುಂಗಿದವರು ವಾಂತಿ ಮಾಡುವಂತೆ ಮಾಧವನ ಹೊಟ್ಟೆಯಲ್ಲಿದ್ದ ಕಲ್ಮಶವೆಲ್ಲ ಹೊರಹೊಮ್ಮಿದವು. ಆದರ ದುರ್ವಾಸನೆ ಮೇಲಿನ ಲೋಕಗಳಿಗೂ ತಲುಪಿತು. ಆಗ ಬ್ರಹ್ಮದೇವರು ಭೂಲೋಕಕ್ಕೆ ಬಂಧು ಮಾಧವನ ಶಿರವನ್ನು ಸ್ಪರ್ಶಿಸಿ ಇಂತೆಂದರು "ಮಾಧವ ! ನಿನ್ನ ಪಾಪಗಳು ಪರಿಹಾರವಾದವು. ನೀನು ದೇಹತ್ಯಾಗ ಮಾಡು. ಮುಂದೆ ನೀನು ಪಾಂಡವರ ದೌಹಿತ್ರಸಂತತಿಯಲ್ಲಿ ಜನಿಸಿ,

ಸುಧರ್ಮನ ಮಗನಾಗಿ ತೋಂಡಮಂಡಲಕ್ಕೆ ಅಧಿಪತಿಯಾಗಿ ಆಕಾಶರಾಜನೆಂದು ಪ್ರಖ್ಯಾತನಾಗುವೆ. ಸಾಕ್ಷಾತ್ ಜಗನ್ಮಾತೆಯಾದ ಲಕ್ಷ್ಮೀದೇವಿಯು ನಿನಗೆ ಮಗಳಾಗಿ ಜನಿಸುವಳು. ಶ್ರೀಲಕ್ಷ್ಮೀಪತಿ-ಯಾದ ಶ್ರೀಹರಿಯು ನಿನಗೆ ಅಳಿಯನಾಗುವನು. ಮುಂದೆ ಮೋಕ್ಷವನ್ನು ಪಡೆಯುತ್ತೀಯೆ". ಹೀಗೆ ಆಶೀರ್ವದಿಸಿ ಬ್ರಹ್ಮದೇವರು ಅಂತರ್ಧಾನ ಹೊಂದಿದರು. "ವೇಂ ಪಾಪಂ ಕಟತೇ ಯಸ್ಮಾತ್ಪಾಪದಾಹನಶಕ್ತಿತಃ । ವೇಂಕಟಾಚಲ ಇತ್ಯೇವ ನಾಮ ದೇವಾಸ್ತದಾ ಜಗುಃ ॥" ಮಾಧವನ ಪಾಪಪರಿಹಾರ ಮಾಡಿದ್ದರಿಂದ ದೇವತೆಗಳು ಈ ಪರ್ವತವನ್ನು ವೆಂಕಟಾಚಲ-ವೆಂದು ಕರೆದರು. ಆದ್ದರಿಂದ ಕಲಿಯುಗದಲ್ಲಿ ಇದಕ್ಕೆ ಆ ಹೆಸರು ಪ್ರಾಪ್ತವಾಯಿತು."

ಅದನ್ನು ಕೇಳಿ ಸಂತುಷ್ಟನಾದ ಜನಕಮಹಾರಾಜನು "ಸ್ವಾಮಿ, ವಾಯುದೇವರು ಶೇಷದೇವರಿಗೆ ಕಲಿಯುಗದಲ್ಲಿ ಶ್ರೀಹರಿಯು ವೈಕುಂಠದಿಂದ ಬಂದು ಇಲ್ಲಿ ವಾಸಿಸುವನೆಂದು ಹೇಳಿದರು, ಎಂದು ಹೇಳಿದಿರಿ. ಶ್ರೀಹರಿಯು ಇಲ್ಲಿಗೆ ಬಂದ ಕಾರಣವೇನು ದಯಮಾಡಿ ತಿಳಿಸಿರಿ" ಎಂದು ಪ್ರಾರ್ಥಿಸಲು ಶತಾನಂದರು ಹೀಗೆ ಹೇಳಹತ್ತಿದರು.

ಶತಾನಂದರು : ಪೂರ್ವದಲ್ಲಿ ಸಕಲ ಋಷಿಮುನಿಗಳು ಸೇರಿ ಸರಸ್ವತೀ ನದಿಯ ತಟದಲ್ಲಿ ಒಂದು ಮಹಾಯಾಗವನ್ನು ಮಾಡುತ್ತಿದ್ದರು. ಅಲ್ಲಿಗೆ ಬಂದ ನಾರದರು "ಮುನಿಗಳೇ ! ನೀವು ಆಚರಿಸುತ್ತಿರುವ ಈ ಯಾಗದ ಫಲವನ್ನು ಯಾವ ಸರ್ವೋತ್ತಮ ದೇವತೆಗೆ ಸಮರ್ಪಿಸುವಿರಿ" ಎಂದು ಪ್ರಶ್ನಿಸಿದರು. ಆಗ ಮುನಿ-ಗಳು ಸಂದೇಹಗ್ರಸ್ತರಾಗಿ ಭೃಗುಮುನಿಗಳನ್ನು "ಸರ್ವೋತ್ತಮ ದೇವತೆ ಯಾರು ? ಎಂದು ತಿಳಿದು ಬರಬೇಕೆಂದು" ಪ್ರಾರ್ಥಿ-

ಸಲು ಭೃಗು ಮುನಿಗಳು ಅವರ ವಿಜ್ಞಾಪನೆಯಂತೆ ಸರ್ವೋತ್ತಮ ದೇವತೆಯನ್ನು ತಿಳಿಯಲು ಮೊದಲು ಸತ್ಯಲೋಕಕ್ಕೆ ತೆರಳಿದರು. ಅಲ್ಲಿ ಚತುರನಾದ ಬ್ರಹ್ಮದೇವರು ಸರಸ್ವತೀವಿಲಾಸಮಗ್ನರಾದುದನ್ನೂ, ತಾವು ನಮಿಸಿದರೂ, ತೂಷ್ಣೀಭಾವವಹಿಸಿದುದನ್ನೂ ಕಂಡು ಭೃಗುಮುನಿಗಳು ಸ್ವಲ್ಪ ಅಜ್ಞಾನಯುಕ್ತರಿವರು ಎಂದು ನಿರ್ಧರಿಸಿ (ಕಲಿಯುಗದಲ್ಲಿ ಅವರಿಗೆ ಪೂಜೆ ಆಗದಿರಲಿ ಎಂದು ಶಾಪವಿತ್ತು) ತಮ್ಮ ಕಾರ್ಯ ಕೈಗೂಡದಿದ್ದರಿಂದ ಅವರು ಕೈಲಾಸಕ್ಕೆ ತೆರಳಿದರು. ಅಲ್ಲಿ ರುದ್ರದೇವರು ಗಿರಿಜಾಲಿಂಗನದಲ್ಲಿ ಮೈಮರೆತಿರುವುದನ್ನು ಕಂಡರು. ಪಾರ್ವತಿಯು ಲಜ್ಜೆಯಿಂದ ಮುನಿಗಳ ಆಗಮನವನ್ನು ಶಂಭುವಿಗೆ ತಿಳಿಸಲು ತಮ್ಮ ವಿಹಾರಕ್ಕೆ ವಿಘ್ನವನ್ನುಂಟುಮಾಡಿದ ಭೃಗುಮುನಿಗಳನ್ನು ಶೂಲದಿಂದ ಸಂಹರಿಸಲು ರುದ್ರದೇವರು ಧಾವಿಸಲು ಅವರನ್ನು ತಡೆದು "ರುದ್ರದೇವ ! ಜಗತ್ತಿನಲ್ಲಿ ಇನ್ನು ಮುಂದೆ ಲಿಂಗರೂಪದ ನಿನಗೆ ಪೂಜೆಯಾಗಲಿ" ಎಂದು ಶಾಪವಿತ್ತು ಅಲ್ಲಿಂದ ವೈಕುಂಠಕ್ಕೆ ಹೊರಟರು. ವೈಕುಂಠದಲ್ಲಿ ಶ್ರೀಮನ್ನಾರಾಯಣನು ಶ್ರೀಲಕ್ಷ್ಮ್ಯಾಲಿಂಗಿತವಕ್ಷಸನಾಗಿ ಶೇಷತಲ್ಪದಲ್ಲಿ ಪವಡಿಸಿ ಯೋಗನಿದ್ರಾವಶನಾದವನಂತೆ ನಟಿಸುತ್ತಿರಲು ಕೋಪದಿಂದ ಭೃಗುಋಷಿಗಳು ನಾರಾಯಣನ ವಕ್ಷಃಸ್ಥಳಕ್ಕೆ ತಮ್ಮ ಪಾದದಿಂದ ತಾಡನ ಮಾಡಿದರು. ಶ್ರೀಲಕ್ಷ್ಮೀಪತಿಯು ಆಗಲೇ ಎಚ್ಚತ್ತವನಂತೆ ಮೇಲೆದ್ದು ತಾನು ಅಪರಾಧ ಮಾಡಿದವನಂತೆ ಕ್ಷಮಾಯಾಚಿಸುತ್ತಾ ಭೃಗುಋಷಿಗಳನ್ನು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ ಆ ಪಾದೋದಕವನ್ನು ಮನೆಯಲ್ಲಿ ಎಲ್ಲ ಕಡೆ ಪ್ರೋಕ್ಷಿಸಿ, ತಾನೂ ಪ್ರೋಕ್ಷಿಸಿಕೊಂಡು ಲಕ್ಷ್ಮೀದೇವಿಗೂ ಪ್ರೋಕ್ಷಿಸಿ ಮುನಿಗಳನ್ನು ಔಪಚಾರಿಕ ವಾಕ್ಯಗಳಿಂದ ಆನಂದಗೊಳಿಸಿದನು. ಪರಮಾನಂದಭರಿತರಾದ ಭೃಗುಮುನಿಗಳು ಶ್ರೀಹರಿಯೊಬ್ಬನೇ ಸರ್ವೋತ್ತಮ ದೇವತೆಯೆಂದು ಮನಗಂಡು ಸರಸ್ವತೀ ತಟಕ್ಕೆ

ಬಂದು ಋಷಿಮುನಿಗಳಿಗೆ ಶ್ರೀವಿಷ್ಣುವೇ ಸರ್ವೋತ್ತಮನೆಂದು ಹೇಳಿದರು. ಆಗ ಮುನಿಗಳು ಯಾಗವನ್ನು ಮುಗಿಸಿ ಅದನ್ನು ಶ್ರೀಹರಿಗೆ ಸಮರ್ಪಣ ಮಾಡಿದರು. ಹರಿಸರ್ವೋತ್ತಮಃ ಸಾಕ್ಷಾದ್ರಮಾದೇವೀ ತತಃಪರಂ । ವಿಃವಾಯೂ ತದಂತೇ ಚ ತದಂತೇ ಶರ್ವಪೂರ್ವಕಾಃ ॥" – "ರುದ್ರದೇವರಿಗಿಂತ ಆದಿಶೇಷನೂ, ಅವನಿಗಿಂತ ಗರುಡನೂ ಅಽಕರು. ಗರುಡನಿಗಿಂತ ವಾಯುದೇವರು ಅಽಕರು. ಅವನಿಗಿಂತ ಬ್ರಹ್ಮದೇವರು ಅಽಕರು. ಬ್ರಹ್ಮದೇವರಿಗಿಂತ ರಮಾದೇವಿಯು ಬಹ್ವಽಕಳು. ರಮಾದೇವಿಗಿಂತ ಅನಂತ ಗುಣಾಽಕನೂ ಸ್ವತಂತ್ರನೂ ಆದ ಶ್ರೀಮನ್ನಾರಾಯಣನೇ ಸಕಲ ಜಗನ್ನಿಯಂತೃವಾಗಿ, ಸರ್ವದೇವೋತ್ತಮನಾಗಿರುವನು. ವ್ಯಾಪಕನಾದುದರಿಂದ ಅವನು ವಿಷ್ಣುವೆಂಬ ಹೆಸರಿನಿಂದ ಖ್ಯಾತನಾಗಿದ್ದಾನೆ ಹೀಗೆಯೇ ತಾರತಮ್ಯವನ್ನು ತಿಳಿಯಬೇಕು ಎಂದು ಆ ಸರ್ವಮುನಿ ಸಭೆಯಲ್ಲಿ ತೀರ್ಮಾನವಾಯಿತು.

ಭೃಗುಋಷಿಗಳು ಹೊರಟುಹೋದಮೇಲೆ ವೈಕುಂಠದಲ್ಲಿ ರಮಾದೇವಿಯು ನಾರಾಯಣನೊಡನೆ "ಸ್ವಾಮಿ, ಆವರನಾದ ಮುನಿಯು ನಾನು ವಾಸಿಸುವ ನಿನ್ನ ವಕ್ಷಃಸ್ಥಳವನ್ನು ಪಾದದಿಂದ ತಾಡನಮಾಡಿದ್ದಾನೆ. ನಾನಿನ್ನು ಇಲ್ಲಿ ಇರುವುದಿಲ್ಲ. ನನ್ನ ತವರು ಮನೆಗೆ ಹೋಗುತ್ತೇನೆ" ಎಂದು ಪ್ರೇಮಕಲಹಮಾಡಿ ನಿತ್ಯಾವಿಯೋಗನಿಯಾಗಿದ್ದರೂ ಭಾವಿಲೋಕಕಲ್ಯಾಣಕ್ಕಾಗಿಯೂ ಭಗವತ್ಸಂಕಲ್ಪದ ಮಹತ್ವವನ್ನು ಜಗತ್ತಿಗೆ ಪ್ರಕಟಿಸಲೂ ವೈಕುಂಠದಿಂದ ತನ್ನ ತವರೂರಾದ ಕೊಲ್ಲಾಪುರಕ್ಕೆ ದಯಮಾಡಿಸಿದಳು. "ಚಿಂತಾಸಂತಾಪ ಮುಂತಾದ ದೋಷವಿದೂರನಾಗಿದ್ದರೂ, ಸ್ವರಮಣನಾದ ಶ್ರೀಹರಿಯು ರಮಾದೇವಿಯ ವಿರಹದುಃಖವನ್ನು ನಟಿಸುತ್ತಾ ಅಜ್ಞಜನರನ್ನು ಮೋಹಗೊಳಿಸುತ್ತಾ ವೈಕುಂಠವನ್ನು ತ್ಯಜಿಸಿ

ಸುವರ್ಣಮುಖರೀನದಿಯ ದಡದಲ್ಲಿದ್ದ ಶೇಷಾಚಲಕ್ಕೆ ಬಂದು ಸ್ವಾಮಿಪುಷ್ಕರಣೀ ತೀರದಲ್ಲಿ ಹುಣಸೇಮರದ ಬುಡದಲ್ಲಿರುವ ವಲ್ಮೀಕದಲ್ಲಿ ಅವಿತುಕೊಂಡು ರಹಸ್ಯವಾಗಿ ವಾಸ ಮಾಡಲಾರಂ-ಭಿಸಿದನು.

ಹೀಗೆ ವಾಸಮಾಡುತ್ತಿರುವಾಗ ದ್ವಾಪರಾಂತ್ಯದಲ್ಲಿ ಇಪ್ಪ-ತ್ತೆಂಟನೆಯ ಕಲಿಯುಗವು ಆರಂಭವಾಗಲು ಚೋಳಮಂಡಲ-ವನ್ನು, ಚೋಳರಾಜನೆಂಬ ಅರಸು ಧರ್ಮದಿಂದ ಆಳುತ್ತಿದ್ದನು. ಅದೇ ಸಮಯದಲ್ಲಿ ಶ್ರೀಹರಿಯ ಸೇವೆಗೋಸ್ಕರ ತಾನು ಗೊಲ್ಲ-ರವಳಾಗಿ, ಬ್ರಹ್ಮನನ್ನು ಹಸುವಾಗಿಯೂ, ರುದ್ರನನ್ನು ಕರುವಾ-ಗಿಯೂ ಮಾಡಿ ಚೋಳರಾಜನಿಗೆ ಆ ಹಸುಕರುಗಳನ್ನು (ಶ್ರೀಹರಿ-ಯನ್ನು ಹುಡುಕುವ ಉದ್ದಿಶ್ಯದಿಂದ) ಮಾರಿ ಕೊಲ್ಹಾಪುರಕ್ಕೆ ತೆರಳಿದಳು. ಗೋರೂಪದ ಬ್ರಹ್ಮದೇವರು ಪ್ರತಿನಿತ್ಯ ಇತರ ಗೋಗಳೊಡನೆ ಶೇಷಾಚಲಕ್ಕೆ ಬಂದು ಶ್ರೀಪತಿಯನ್ನು ಅನ್ವೇಷಣ ಮಾಡಿ ಹುತ್ತದಲ್ಲಿ ಅಡಗಿರುವ ಶ್ರೀನಿವಾಸನಿಗೆ ತನ್ನ ಕೆಚ್ಚಲ ಹಾಲಿನಿಂದ ಧಾರಾಕಾರವಾಗಿ ಅಭಿಷೇಕಮಾಡಿ ಹೋಗುತ್ತಿದ್ದರು. ರಾಜಕುಮಾರನಿಗಾಗಿ ಕೊಂಡ ಹಸುವು ಹಾಲುಕೊಡದಿರುವು-ದನ್ನು ಕಂಡು ಕುಪಿತಳಾದ ರಾಣಿಯು ಗೋಪಾಲಕನನ್ನು ಕರೆಯಿಸಿ ಅವನನ್ನು ನಿಂದಿಸಿ ಚಾಟಿಯಿಂದ ಹೊಡೆಸಿದಳು. ಇದರಿಂದ ಗೋಪಾಲಕನಿಗೆ ಅತೀವ ದುಃಖವಾಯಿತು. ನಿರ್ದೋಷಿಯಾದ ತನಗೆ ಶಿಕ್ಷೆಯಾದ್ದರಿಂದ ಅವನು ಈ ಗೋವು ಹಾಲನ್ನು ಏನು ಮಾಡುತ್ತದೋ ನೋಡಬೇಕೆಂದು ಮರುದಿನ ಅದನ್ನೇ ಅನುಸರಿಸಿ ಹೋದನು. ಪ್ರತಿನಿತ್ಯದಂತೆ ಆ ಗೋವು ಹುತ್ತದ ಮೇಲೆ ನಿಂತು ಶ್ರೀಹರಿಗೆ ಕ್ಷೀರದಿಂದ ಅಭಿಷೇಕಮಾಡಹತ್ತಿತು. ಅದನ್ನು ಕಂಡು ಕ್ರುದ್ಧನಾದ ಗೋಪಾಲಕನು ಕೈಯಲ್ಲಿದ್ದ ಕೊಡಲಿಯಿಂದ

ಗೋವನ್ನು ಸಂಹರಿಸಲು ಉದ್ಯುಕ್ತನಾದನು. ಆಗ ಭಕ್ತವತ್ಸಲನಾದ ಶ್ರೀನಿವಾಸನು ತನ್ನ ಸೇವೆ ಮಾಡುತ್ತಿರುವ ಹಸುವನ್ನು ರಕ್ಷಿಸಲು ಹುತ್ತದಿಂದ ಮೇಲೆದ್ದು ಬಂದು ಹಸುವಿಗೆ ಬೀಳುತ್ತಿದ್ದ ಕೊಡಲಿಯ ಪೆಟ್ಟನ್ನು ತಾನೇ ಶಿರದಲ್ಲಿ ಸ್ವೀಕರಿಸಿದನು. ಏನಾಶ್ಚರ್ಯ ! ಶ್ರೀಹರಿಯ ಶಿರಸ್ಸು ಒಡೆದು ಏಳು ತಾಳಾವೃಕ್ಷದ ಎತ್ತರದವರೆಗೆ ರಕ್ತವು ಚಿಮ್ಮಿ ಹರಿಯಹತ್ತಿತು. (ಅಪ್ರಾಕೃತಶರೀರನಾದ ಸ್ವಾಮಿಗೆ ತಲೆ ಒಡೆಯುವುದು, ರಕ್ತ ಬರುವುದು ಇವೆಲ್ಲ ಅಜ್ಞಜನಮೋಹನಾರ್ಥವಾಗಿ ಪರಮಾತ್ಮನು ಪ್ರದರ್ಶಿಸಿದ ನಟನೆಯೇ ವಿನಃ ಆ ಪ್ರಭುವು ನಮ್ಮಂತೆ ಪ್ರಾಕೃತಶರೀರಿಯಲ್ಲ. ಅಚಿಂತ್ಯಾದ್ಭುತಶಕ್ತನಾದ ಶ್ರೀಹರಿಯು ತತ್ಕಾಲದಲ್ಲಿ ರಕ್ತವನ್ನು ಸೃಷ್ಟಿಸಿ ಆ ರೀತಿ ಪ್ರದರ್ಶಿಸಿದನೆಂದು ತಿಳಿಯಬೇಕು.) ಇದನ್ನು ಕಂಡು ಗೋಪಾಲಕನು ಭಯವಿಹ್ವಲನಾಗಿ ನೆಲಕ್ಕೆ ಉರುಳಿ ರಕ್ತ ಕಾರಿ ಪ್ರಾಣ ಬಿಟ್ಟನು. ಆ ಹಸುವು ಬಡಬಡನೆ ಗಿರಿಯಿಂದ ಇಳಿದು ಅರಮನೆಗೆ ಬಂದು ರಾಜನ ಎದುರು ಬಿದ್ದು ಮೂಕ ಸಂಕಟವನ್ನು ಪ್ರದರ್ಶಿಸಿತು. ಅದನ್ನು ಕಂಡ ರಾಜನು ಮಂದೆಯೊಡನೆ ಹಸುವನ್ನು ಸೇರಿಸಲು ಒಬ್ಬ ಸೇವಕನನ್ನು ಕಳುಹಿಸಿದನು. ಆತನು ಹಸುವನ್ನು ಹೊಡೆದುಕೊಂಡು ಶೇಷಾಚಲಕ್ಕೆ ಬಂದು ಅಲ್ಲಿ ಹುತ್ತದಿಂದ ರಕ್ತ ಚಿಮ್ಮುತ್ತಿರುವುದು, ಗೋಪಾಲಕನು ಮೃತನಾಗಿರುವುದು ಎಲ್ಲವನ್ನೂ ಕಂಡು ಭರದಿಂದ ಅರಮನೆಗೆ ಬಂದು ವೃತ್ತಾಂತವನ್ನು ರಾಜನಲ್ಲಿ ವಿಜ್ಞಾಪಿಸಿದನು. ಚೋಳರಾಜನು ಆಶ್ಚರ್ಯಕರವಾದ ಆ ಸಂಗತಿಯನ್ನಾಲಿಸಿ ಪಾಲಕಿಯಲ್ಲಿ ಕುಳಿತು ಶೇಷಾಚಲಕ್ಕೆ ಬಂದು ಅಲ್ಲಿನ ವಿಚಿತ್ರ ದೃಶ್ಯವನ್ನು ಕಂಡು ದುಃಖಿತನಾಗಿ ಇದೇನು ಅನಾಹುತ ! ಆಗಬಾರದ ಈ ಘಟನೆ ಹೇಗಾಯಿತು ಎಂದು ಗಟ್ಟಿಯಾಗಿ ಕೂಗಲು ಭೇದಿಸಿ ಹುತ್ತದಿಂದ ಮೇಲೆದ್ದ ಶ್ರೀನಿವಾಸ ರಾಜರ ಕಣ್ಣಿಗೆ ಕಾಣಿಸಿಕೊಂಡು ದುಃಖಿತಾಪಗಳನ್ನು ನಟಿಸುತ್ತಾ "ಕಲಿಯುಗ

ಕಳೆಯುವವರೆಗೆ ನೀನು ಪಿಶಾಚಿಯಾಗಿರು" ಎಂದು ಶಾಪ ನೀಡಿದನು. ಆಗ ರಾಜನು ದುಃಖಿಸುತ್ತಾ "ಸ್ವಾಮಿ, ನಿರಪರಾಧ-ಯಾದ ನನಗೆ ಕಠಿಣ ಶಿಕ್ಷೆ ವಿಧಿಸುವುದು ಯುಕ್ತವೇ, ಕಾಪಾಡು" ಎಂದು ಪ್ರಾರ್ಥಿಸಲು ಶ್ರೀನಿವಾಸನು "ಎಲೈ ರಾಜ, ನನ್ನ ವಾಕ್ಯ ಎಂದಿಗೂ ಸುಳ್ಳಾಗದೆಂದು ಜ್ಞಾನಿಗಳು ಹೇಳುತ್ತಾರೆ. ಯುಕ್ತಾ-ಯುಕ್ತ ವಿಚಾರಮಾಡದೆ ನಾನು ನಿನಗೆ ನೋವಿನ ಭರದಲ್ಲಿ ಶಾಪ ನೀಡಿದೆನು. ಕೇಳು, ಕಲಿಯುಗದಲ್ಲಿ ಆಕಾಶರಾಜನು ತನ್ನ ಮಗ-ಳಾದ ಪದ್ಮಾವತಿಯನ್ನು ನನಗೆ ಕೊಟ್ಟು ವಿವಾಹ ಮಾಡುವನು. ಆ ಕಾಲದಲ್ಲಿ ನನಗೆ ಒಂದು ಕಿರೀಟವನ್ನು ಕೊಡುತ್ತಾನೆ. ನಾನು ಅದನ್ನು ಪ್ರತಿ ಶುಕ್ರವಾರ ಸಾಯಂಕಾಲ ಧರಿಸುತ್ತೇನೆ. ಆಗ ಆರು ಘಳಿಗೆ ಕಾಲ ನನ್ನ ಕಣ್ಣಿನಿಂದ ಆನಂದಾಶ್ರು ಹರಿಯುವುದು. ಆಗ ನಿನಗೆ ಆನಂದವಾಗುವುದು ಎಂದು ತನ್ನ ಕಲ್ಯಾಣ ಹಾಗೂ ರಾಜನ ಸುಖಸಮಯಗಳನ್ನು ನಿರೂಪಿಸಿ ವರವಿತ್ತನು.

ತರುವಾಯ ಶ್ರೀನಿವಾಸನು ಔಷಧಕ್ಕಾಗಿ ಬೃಹಸ್ಪತ್ಯಾಚಾರ್ಯ-ರನ್ನು ನೆನೆಯಲು ಅವರು ಬಂದು ಅತ್ತಿಯ ಹಾಲನ್ನು ಎಕ್ಕೇಗಿಡದ ಹತ್ತಿಗೆ ಸವರಿ ತಲೆಗೆ ಪಟ್ಟು ಹಾಕಿದರೆ ಗಾಯ ವಾಸಿಯಾಗುವು-ದೆಂದು ಹೇಳಿದರು. ಶ್ರೀನಿವಾಸನು ಅದೇ ರೀತಿ ಮಾಡುತ್ತಿರಲು ಒಂದು ದಿನ ಅರುಣೋದಯಕಾಲದಲ್ಲಿ ಔಷಧಕ್ಕಾಗಿ ಹೋಗು-ತ್ತಿರಲು, ಶ್ಯಾಮೇಧಾನ್ಯವನ್ನು ಅಪಹರಿಸುತ್ತಿದ್ದ ವೃಷಭನೆಂಬ ದೈತ್ಯನನ್ನು ಸಂಹರಿಸಿ ಪರಿವಾರದೊಡನೆ ಮರಳಿ ಬರುತ್ತಿದ್ದ ವರಾಹ ದೇವನನ್ನು ಕಂಡನು. ಶ್ರೀನಿವಾಸ-ವರಾಹದೇವರು ಪರಸ್ಪರ ಕುಶಲ ಪ್ರಶ್ನೆ ಮಾಡಿ ಮಾತನಾಡಹತ್ತಿದರು. ದೇವತೆಗಳದನ್ನು ವಿಮಾನಾರೂಢರಾಗಿ ಬಂದುನೋಡಿ ಆ ಭವ್ಯ ಉಭಯರೂಪದ ಶ್ರೀಹರಿಯನ್ನು ಸ್ತುತಿಸಿದರು. ಆಗ ವರಾಹದೇವರ ಪ್ರಶ್ನೆಗೆ

ಶ್ರೀನಿವಾಸನು ಭೃಗುಋಷಿಗಳ ಆಗಮನದಿಂದಾರಂಭಿಸಿ ಸಕಲ ವೃತ್ತಾಂತವನ್ನು ನಿರೂಪಿಸಿ ಪರ್ವತದಲ್ಲಿ ವಾಸಮಾಡಲು ಸ್ಥಳವನ್ನು ಯಾಚಿಸಿದನು. ವರಾಹಸ್ವಾಮಿಯು, ಹಣವನ್ನು ಕೊಟ್ಟು ಸ್ಥಳ-ವನ್ನು ಪಡೆಯುವಂತೆ ಶ್ರೀನಿವಾಸನಿಗೆ ಹೇಳಲು "ಪ್ರಥಮಂ ದರ್ಶನಂ ತೀರ್ಥಂ ನೇವೇದ್ಯಂ ಕ್ಷೀರಸೇಚನಮ್ । ಇದಮೇವ ನರಂ ದ್ರವ್ಯಂ ದದಾಮಿ ಕರುಣಾನಿಧೇ ॥" ಪ್ರಥಮದರ್ಶನ-ತೀರ್ಥಕ್ಷೀರಾಭಿಷೇಕ ಮತ್ತು ನೈವೇದ್ಯರೂಪ ದ್ರವವನ್ನು ಸ್ವೀಕರಿಸಿ ಸ್ಥಳವನ್ನು ಕೊಡು" ಎಂದು ಹೇಳಲು ಅದಕ್ಕೆ ಒಪ್ಪಿದ ವರಾಹ-ದೇವರು ಶ್ರೀನಿವಾಸನ ಪಾದದಲ್ಲಿ ನೂರು ಹೆಜ್ಜೆಯಷ್ಟು ಸ್ಥಳವನ್ನು ನೀಡಿದನು. ಮತ್ತು ಅವನ ಶುಶ್ರೂಷೆಗಾಗಿ ಬಕುಲಮಾಲಿಕೆಯನ್ನು ನಿಯಮಿಸಿದನು. ಆ ಬಕುಳಾದೇವಿಯೇ ದ್ವಾಪರದಲ್ಲಿ ಶ್ರೀಕೃಷ್ಣನ ತಾಯಿಯಾಗಿದ್ದ ಯಶೋದಾದೇವಿಯು. ಶ್ರೀಕೃಷ್ಣನ ಒಂದು ವಿವಾಹವನ್ನೂ ನೋಡಲಿಲ್ಲವೆಂದು ವಿಷಾದಿಸಿದ ಯಶೋದೆಯು 'ಕೃಷ್ಣಾ! ನಿನ್ನ ಕಲ್ಯಾಣವನ್ನು ನಾನು ನೋಡಬಯಸುತ್ತೇನೆ' ಎಂದು ಹೇಳಿದಾಗ ಕೃಷ್ಣನು "ಹೇ ಜನನಿ ! ಮುಂದಿನ ಜನ್ಮದಲ್ಲಿ ನಿನ್ನ ಆಶೆ ಫಲಿಸುವುದು. ಆಗ ನೀನೇ ನಿಂತು ವಿವಾಹವನ್ನು ನೆರವೇರಿ-ಸುತ್ತೀಯೆ" ಎಂದು ಹೇಳಿದ್ದನು. ಆ ಯಶೋದೆಯೇ ಈಗ ಬಕುಳಾದೇವಿಯಾಗಿ ಜನಿಸಿ ಶ್ರೀನಿವಾಸನ ಸೇವೆಗಾಗಿ ಬಂದಿ-ರುವಳು.

ಒಂದು ದಿನ ಶ್ರೀನಿವಾಸನು ಬೇಟೆಯಾಡಲು ಸಂಕಲ್ಪಿಸಿ ಕುದುರೆಯನ್ನು ಸ್ಮರಿಸಲು ವಾಯುದೇವರು ಕುದುರೆಯಾಗಿಯೂ ಲಕ್ಷ್ಮೀದೇವಿಯು ಕಡಿವಾಣವಾಗಿಯೂ ಅಲ್ಲಿ ಪ್ರತ್ಯಕ್ಷರಾದರು. ಶ್ರೀನಿವಾಸನು ಸರ್ವಾಲಂಕಾರಭೂಷಿತನಾಗಿ, ಕುದುರೆಯನ್ನು ನಾನಾಭರಣಗಳಿಂದ ಅಲಂಕರಿಸಿ, ಕಸ್ತೂರಿ ತಿಲಕವನ್ನಿಟ್ಟು,

ತಾಂಬೂಲ ಸಂಚಿಯನ್ನು ನಡುವಿಗೆ ಕಟ್ಟಿ, ಕುದುರೆಯನ್ನೇರಿ, ಪರ್ವತದಿಂದಿಳಿದು ನಾನಾವಿಧ ಕ್ರೂರ ಮೃಗಗಳನ್ನು ಬೇಟೆಯಾಡುತ್ತಿರಲು ಮಾರ್ಗಮಧ್ಯದಲ್ಲಿ ಒಂದು ಆನೆಯು ಕಣ್ಣಿಗೆ ಬಿದ್ದಿತು. ಬೇಟೆಯಾಡಲು ಅದನ್ನು ಅಟ್ಟಿಸಿಕೊಂಡು ಹೋಗುತ್ತಿರಲು ಆ ಗಜವು ಅನೇಕ ಕನ್ನಿಕೆಯರು ಪುಷ್ಪಾಪಚಯ ಮಾಡುತ್ತಿದ್ದ ವನಾಂತರಕ್ಕೆ ಬಂದು ಅಲ್ಲಿ ಶ್ರೀನಿವಾಸನಿಗೆ ಸೊಂಡಲನ್ನೆತ್ತಿ ನಮಸ್ಕರಿಸಿ ಹೊರಟುಹೋಯಿತು" ಎಂದು ಸೂತರು ಹೇಳಿದರು. ಆಗ ಋಷಿಗಳು 'ಸ್ವಾಮಿ ಆ ಕನ್ನಿಕೆಯರು ಯಾರು ? ಅವರ ವೃತ್ತಾಂತವನ್ನು ಹೇಳಿ' ಎಂದು ಪ್ರಾರ್ಥಿಸಲು ಸೂತರು ಹೇಳಹತ್ತಿದರು.

"ಆಕಾಶರಾಜನು ಮಕ್ಕಳಿಗಾಗಿ ಚಿಂತಿಸಿ ದೇವಗುರುವನ್ನು ಪ್ರಾರ್ಥಿಸಲು ಅವರು ಬಂದು ರಾಜನ ಅಂತರಂಗವನ್ನು ತಿಳಿದು "ಪುತ್ರರಿಗಾಗಿ ಯಾಗ ಮಾಡು, ಮಕ್ಕಳಾಗುತ್ತದೆ" ಎಂದು ಹೇಳಲು ಅದರಂತೆ ಯಾಗಕ್ಕಾಗಿ ಭೂಶೋಧನ ಮಾಡುತ್ತಿರುವಾಗ ಸಹಸ್ರದಳಪದ್ಮದಲ್ಲಿ ವಿರಾಜಿಸುತ್ತಿದ್ದ ಹೆಣ್ಣುಮಗುವೊಂದು ದೃಷ್ಟಿಗೆ ಬಿದ್ದಿತು. ಆಗ ರಾಜನು ಇದನ್ನು ಹೇಗೆ ಸಂರಕ್ಷಿಸುವುದು ಮುಂತಾಗಿ ಚಿಂತಿಸುತ್ತಿರಲು "ಪುತ್ರೀಯಂ ತವ ಪುಣ್ಯದಾ" "ರಾಜನ್ ಇವಳು ನಿನ್ನ ಮಗಳು. ಪುಣ್ಯಪ್ರದಳಾಗಿ ನಿನಗೆ ಕೀರ್ತಿ ತರುವಳು" ಎಂದು ಆಕಾಶವಾಣಿಯಾಯಿತು. ಅದನ್ನು ಕೇಳಿ ಪರಮಾನಂದಭರಿತನಾದ ಆಕಾಶರಾಜನು ಆ ಮಗುವನ್ನು ಪತ್ನಿಯಾದ ಧರಣೀದೇವಿಗೆ ಕೊಟ್ಟು ವಿಷಯವನ್ನು ತಿಳಿಸಿ "ದೇವಿ, ಈ ಮಗುವನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗಳಂತೆ ಸಂರಕ್ಷಿಸು" ಎಂದು ಹೇಳಿ ಪತ್ನಿಗೆ ಕೊಟ್ಟನು. ಆ ಮಗುವು ದೊರೆತ ಪ್ರಭಾವದಿಂದ ಧರಣೀದೇವಿಯು ಗರ್ಭವತಿಯಾಗಿ ಪುತ್ರನನ್ನು ಪ್ರಸವಿಸಿ-

ದಳು. ಅವನಿಗೆ ವಸುಧಾನ ಎಂದು ನಾಮಕರಣ ಮಾಡಿದರು. ಕಮಲದಲ್ಲಿ ದೊರೆತ ಮಗುವಿಗೆ "ಪದ್ಮೋದರಾಂ ಪದ್ಮಗರ್ಭಾಂ ಪದ್ಮಜಾತಾಂ ವರಾನನಾಮ್ । ಪದ್ಮಾಯಾ ಅವತಾರತ್ವಾತ್ ರಾಜಾ ಪದ್ಮಾವತೀತಿ ಚ ।।" ಪದ್ಮಗರ್ಭಳೂ, ಪದ್ಮದಂತೆ ಉದರ-ವುಳ್ಳವಳೂ, ಪದ್ಮದಲ್ಲಿ ಜನಿಸಿದವಳೂ, ಶ್ರೇಷ್ಠಮುಖಾರವಿಂದ-ವುಳ್ಳವಳೂ, ಲಕ್ಷ್ಮೀದೇವಿಯ ಅವತಾರಳೂ ಆದ ಆ ಮಗುವಿಗೆ 'ಪದ್ಮಾವತಿ'ಯೆಂದೇ ರಾಜ ನಾಮಕರಣ ಮಾಡಿದನು. ರಮಾ-ಚಂದ್ರರಂತೆ ಆ ಹುಡುಗರು ಅಭಿವೃದ್ಧರಾದರು. ಯೌವನ-ಸಂಪನ್ನಳಾದ ಪದ್ಮಾವತಿಯು ಸಖಿಯರಿಂದ ಕೂಡಿಕೊಂಡು ಹೂಗಳನ್ನು ತರಲು ವನಕ್ಕೆ ಬಂದಿದ್ದಳು. ಅವರೇ ಆ ಕನ್ನಿಕೆಯರು" ಎಂದು ಹೇಳಿ ಸೂತರು ಕಥೆಯನ್ನು ಮುಂದುವರಿಸಿ ಹೀಗೆ ಹೇಳಿದರು.

ಅದೇ ಸಮಯದಲ್ಲಿ ವೃದ್ಧ ಬ್ರಾಹ್ಮಣರೂಪದಿಂದ ಬಂದ ನಾರದರು ಪದ್ಮಾವತಿಯ ಹಸ್ತನಿರೀಕ್ಷಣ ಮಾಡಿ "ದೇವಿ ! ರಮಾನಾಥನಾದ ಶ್ರೀ ಶ್ರೀನಿವಾಸನೇ ನಿನಗೆ ಪತಿಯಾಗುವನು" ಎಂದು ಭವಿಷ್ಯ ನುಡಿದು ಅದೃಶ್ಯರಾದರು. ಆನೆಯನ್ನು ಬೆನ್ನಟ್ಟಿ ಬಂದ ಶ್ರೀನಿವಾಸನು ಅಲ್ಲಿ ಪುಷ್ಪಾವಚಯ ಮಾಡುತ್ತಿದ್ದ ಪದ್ಮಾವತಿಯನ್ನು ನೋಡಿದನು. ಅವಳೂ ಶ್ರೀನಿವಾಸನನ್ನು ನೋಡಿದಳು. ಶ್ರೀನಿವಾಸನು ಪದ್ಮಾವತಿಯೊಡನೆ ಮಾತನಾಡಹತ್ತಿ ಅವಳೊಡನೆ ರಮಿಸಲಾಶಿಸಿದನು. ಅದರಿಂದ ಕುಪಿತಳಾದ ಪದ್ಮಾವತಿಯು ಸಿಟ್ಟಾದಳು. ಪರಸ್ಪರ ಕಲಹವೇರ್ಪಟ್ಟು ಪದ್ಮಾವತಿಯು ಕಲ್ಲುಗಳಿಂದ ಶ್ರೀನಿವಾಸನ ಕುದುರೆಗೆ ಹೊಡೆದಳು. ಕೂಡಲೇ ಆ ಹಯವು ಮೃತವಾಯಿತು. ದುಃಖಿತನಾದ ಶ್ರೀನಿವಾಸನು ಉತ್ತರಾಭಿಮುಖವಾಗಿ ಬೆಟ್ಟವನ್ನು

ಹತ್ತಿ ಹಾಸಿಗೆಯಲ್ಲಿ ಮುಸುಕಿಟ್ಟು ಮಲಗಿದನು. ಬಕುಳ-ಮಾಲಿಕೆಯು ಶ್ರೀನಿವಾಸನಿಗೆ ಪರಮಾನ್ನವನ್ನು ಉಣಬಡಿಸಲು ತಂದು ಮಲಗಿರುವ ಅವನನ್ನು ಮಾತನಾಡಿಸಿದರೂ ಉತ್ತರ ಕೊಡದಿರಲು ಉಪಚಾರಮಾತುಗಳನ್ನಾಡಿ ಪಾದಸೇವೆ ಮಾಡಿ "ಶ್ರೀನಿವಾಸ ! ಏಕೆ ಮಲಗಿರುವೆ, ನಿನ್ನ ಆಶೆ ಏನಿದ್ದರೂ ಪೂರೈಸಲು ಯತ್ನಿಸುವೆ, ಏಳು ದೇವ !" ಎಂದು ಹೇಳಿ ಬಲಾತ್ಕಾರದಿಂದ ಮುಸುಗು ತೆಗೆದು ಮಲಗಲು ಕಾರಣವನ್ನು ಮತ್ತೆ ಪ್ರಶ್ನಿಸಿದಳು. ಶ್ರೀನಿವಾಸನು ನಿಟ್ಟುಸಿರು ಬಿಡುತ್ತಾ ಉದ್ಯಾನವನದಲ್ಲಿ ನಡೆದ ಘಟನೆಗಳನ್ನೆಲ್ಲಾ ಹೇಳಿ ಆಕಾಶರಾಜನ ಪುತ್ರಿಯಾದ ಪದ್ಮಾವತಿ-ಯನ್ನು ತಾನು ಮೋಹಿಸಿರುವುದಾಗಿಯೂ ಅವಳನ್ನು ಪಡೆದಲ್ಲದೇ ತನಗೆ ಸಮಾಧಾನವಿಲ್ಲವೆಂದೂ ಪದ್ಮಾವತಿಯನ್ನು ವಿವಾಹ-ವಾಗಲೆಂದೇ ತಾನು ಧರೆಗಿಳಿದು ಬಂದಿರುವುದಾಗಿಯೂ ಹೇಳಿ ನೀನು ಈ ಕಾರ್ಯವನ್ನು ಯಶಸ್ವಿಗೊಳಿಸಿ ಅವಳೊಡನೆ ವಿವಾಹ ಮಾಡಿಸು, ಮುಂತಾಗಿ ನಿರೂಪಿಸಿದನು. ಬಕುಳಾದೇವಿಯು ಕೌತುಕದಿಂದ 'ದೇವ ಆ ಪದ್ಮಾವತಿ ಯಾರು ? ಅವಳ ಪೂರ್ವ-ವೃತ್ತಾಂತವೇನು ತಿಳಿಸು' ಎಂದು ಪ್ರಶ್ನಿಸಲು ಶ್ರೀನಿವಾಸನು ಇಂತೆಂದನು. "ಹಿಂದೆ ನಾನು ರಾಮಾವತಾರ ಮಾಡಿದಾಗ ಲಕ್ಷ್ಮಿಯು ಸೀತೆಯಾಗಿ ಜನಿಸಿದಳು. ಅವಳನ್ನು ವಿವಾಹವಾದ ನಾನು ತಂದೆತಾಯಿಗಳ ವಚನಪರಿಪಾಲನೆಗಾಗಿ ಕಾಡಿಗೆ ಸೀತಾ-ಲಕ್ಷ್ಮಣ ಸಹಿತನಾಗಿ ಪ್ರಯಾಣ ಬೆಳೆಸಿದೆನು. ಅಲ್ಲಿ ರಾವಣನೆಂಬ ದೈತ್ಯನು ಸೀತೆಯನ್ನು ಅಪಹರಿಸಲು ಬಂದಾಗ ಸೀತೆಯು ಹಾಹಾಕಾರಮಾಡಲು ಪಾತಾಳದಲ್ಲಿದ್ದ ಅಗ್ನಿಯು ಅದನ್ನಾಲಿಸಿ ಭೂಮಿಗೆ ಬಂದು ಸೀತಾಪಹರಣಕ್ಕೆ ಯತ್ನಿಸುತ್ತಿರುವ ರಾವಣನಿಗೆ ಇವಳು ವಿಪ್ರಪತ್ನಿ, ಸೀತೆಯಲ್ಲ. ನಿನ್ನ ಭಯದಿಂದ ರಾಮನು ಸೀತೆಯನ್ನು ನನ್ನ ಮನೆಯಲ್ಲಿ ಬಚ್ಚಿಟ್ಟಿದ್ದಾನೆ. ಅವಳನ್ನು ನೀನು

ಕರೆದುಕೊಂಡು ಹೋಗು, ಈ ವಿಪ್ರಪತ್ನಿಯನ್ನು ಬಿಡು' ಎಂದು ಹೇಳಿ ತನ್ನಲ್ಲಿದ್ದ ಸೀತಾಕಾರಸದೃಶಳಾದ .ವೇದವತಿಯೆಂಬುವವಳನ್ನು ರಾವಣನಿಗೆ ಒಪ್ಪಿಸಿದನು. ನಿಜವಾದ ಸೀತೆಯನ್ನು ಸ್ವಾಹಾದೇವಿಯ ವಶದಲ್ಲಿಟ್ಟು ಪೂಜಿಸುತ್ತಿದ್ದನು. ರಾವಣನು ವೇದವತಿಯನ್ನು ಸೀತೆಯೆಂದು ಭ್ರಮಿಸಿ ಲಂಕೆಯ ಅಶೋಕವನದಲ್ಲಿಟ್ಟನು. ರಾಮನು ಮುಂದೆ ಸೇತುಬಂಧನ ಮಾಡಿ ಲಂಕೆಯನ್ನು ಮುತ್ತಿ ರಾವಣಾದಿಗಳನ್ನು ಸಂಹರಿಸಿ ಸೀತೆಯೊಡನೆ ಅಯೋಧ್ಯೆಗೆ ಬಂದನು. ಜನಾಪವಾದ ಬರಲು ಸೀತೆಯು ಅಗ್ನಿಪ್ರವೇಶ ಮಾಡಿದಳು. ಕೂಡಲೆ ಎರಡು ಸೀತೆಯ ಆಕೃತಿಗಳೊಡನೆ ಅಗ್ನಿಯು ಪ್ರತ್ಯಕ್ಷನಾಗಿ ಉಭಯರನ್ನು ರಾಮನಿಗೆ ಅರ್ಪಿಸಿದನು. ಆಗ ಇಬ್ಬರು ಸೀತೆ[illegible]ರನ್ನು ಕಂಡು ವಿಸ್ಮಿತನಾದಾಗ ಸೀತೆಯು ರಾಮನಿಗೆ 'ನಾನು ಅನುಭವಿಸಬೇಕಾಗಿದ್ದ ಕಷ್ಟಗಳನ್ನು ಅಕಾರಣನಾಗಿ ವೇದವತಿಯು ಅನುಭವಿಸಿದ್ದಾಳೆ. ನೀನು ಇವಳನ್ನು ವಿವಾಹವಾಗು' ಎಂದು ಪ್ರಾರ್ಥಿಸಲು ಆಗ, 'ನಾನು ಏಕಪತ್ನೀವ್ರತಸ್ಥನಾಗಿದ್ದೇನೆ. ಮುಂದೆ ದ್ವಾಪರಯುಗಾಂತ್ಯದಲ್ಲಿ ಸ್ವೀಕರಿಸುತ್ತೇನೆ ಎಂದು ವರವನ್ನು ಕೊಟ್ಟಿದ್ದೆನು. ಆ ವೇದವತಿಯೇ ಈಗ ಪದ್ಮಾವತಿಯಾಗಿ ಜನಿಸಿದ್ದಾಳೆ. ಇವಳೊಡನೆ ನನಗೆ ಮದುವೆ ಮಾಡಿಸಿ ಪುಣ್ಯಭಾಗಿಯಾಗು' ಎಂದು ಹೇಳಿದನು. ಮತ್ತು ಬಕುಳಾದೇವಿಗೆ ನಾರಾಯಣಪುರಕ್ಕೆ ಹೋಗುವ ಮಾರ್ಗವನ್ನು ತಿಳಿಸಿ ಕುದುರೆಯಮೇಲೆ ಕೂಡಿಸಿ ಕಳಿಸಿದನು. ಬಕುಳಾದೇವಿಯು ಅಲ್ಲಿಂದ ಹೊರಟು ಅಗಸ್ತ್ಯೇಶ್ವರ ದೇವಾಲಯಕ್ಕೆ ಆಗಮಿಸಿದಳು. ಅಲ್ಲಿ ಈಶ್ವರನಿಗೆ ಏಕಾದಶವಾರ ರುದ್ರಾಭಿಷೇಕ ನಡೆಯುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಬಕುಳೆಯು ಹೋಗಿ ಸೇರಿದಳು.

ಇತ್ತ ಶ್ರೀನಿವಾಸನು ಹೆಂಗಸರು ಕಾರ್ಯಸಾಧನೆ ಮಾಡುತ್ತಾರೆಂದು ನಂಬುವಂತಿಲ್ಲ, ಆದ್ದರಿಂದ ಈಗ ನಾನೂ ಪ್ರಯತ್ನಿಸ-

ಬೇಕೆಂದು ಆಲೋಚಿಸಿ ಕೊರವಂಜಿಯ ರೂಪ ಧರಿಸಿ, ಬ್ರಹ್ಮಾಂಡವನ್ನು ಬುಟ್ಟಿಯಾಗಿ ಮಾಡಿ, ಹೊತ್ತು, ಬ್ರಹ್ಮದೇವನನ್ನು ಏಳು ತಿಂಗಳ ಮಗುವನ್ನಾಗಿ ಮಾಡಿ ಸೊಂಟದಲ್ಲಿ ಕೂಡಿಸಿ-ಕೊಂಡು ರುದ್ರದೇವರನ್ನು ಊರುಗೋಲಾಗಿ ಮಾಡಿಕೊಂಡು ಆಕಾಶರಾಜನ ಪಟ್ಟಣಕ್ಕೆ ಬಂದು ರಾಜಬೀದಿಯಲ್ಲಿ 'ಮಕ್ಕಳಿಲ್ಲದವರಿಗೆ ಮಕ್ಕಳು, ಕನ್ಯೆಯರಿಗೆ ವರವನ್ನು, ಅಷ್ಟೇಕೆ, ಅವರ ವರ ಇಷ್ಟಗಳನ್ನು ಪೂರ್ಣಮಾಡುತ್ತೇನೆ' ಎಂದು ಸಾರುತ್ತಾ ಹೊರಟಳು. ಆಗ ಅರಮನೆಯಲ್ಲಿ ಪದ್ಮಾವತಿಯು ಜ್ವರಪೀಡಿತ-ಳಾಗಿ ಮಲಗಿದ್ದಳು. ಆ ಜ್ವರದ ಶಾಂತ್ಯರ್ಥವಾಗಿ ಪುರೋಹಿತರು ಬ್ರಾಹ್ಮಣರು ಅಗಸ್ತ್ಯೇಶ್ವರನಿಗೆ ಕಳಿಸಲಾಗಿತ್ತು. ಪ್ರೀತಿಯ ಮಗಳು ಜ್ವರಪೀಡಿತಳಾಗಿ ಹಾಸಿಗೆ ಹಿಡಿದಿದ್ದರಿಂದ ದುಃಖಿಸುತ್ತಿದ್ದುದರಿಂದ ರಾಜರಾಣಿಯರು ತುಂಬಾ ವ್ಯಾಕುಲಗೊಂಡಿದ್ದರು. ಇದೇ ಸಮ-ಯಕ್ಕೆ ಕೊರವಂಜಿರೂಪದ ಶ್ರೀನಿವಾಸನು ನಾರಾಯಣಪುರಕ್ಕೆ ಬಂದು ಕಣಿ ಹೇಳುವುದಾಗಿ ಘೋಷಿಸುತ್ತಿರಲು ಈ ವಿಚಾರವನ್ನು ನಗರಸ್ತ್ರೀಯರಿಂದ ತಿಳಿದು ರಾಣಿಯಾದ ಧರಣಿದೇವಿಯು ಕೊರವಂಜಿಯನ್ನು ಅರಮನೆಗೆ ಕರೆತಂದು ತಮ್ಮ ದುಃಖಪರಿ-ಹಾರಕ್ಕಾಗಿ 'ಕಣಿ' ಹೇಳು ಎಂದು ಕೇಳಿದಳು. ಆಗ ಕೊರವಂಜಿ ವೇಷದ ಶ್ರೀನಿವಾಸನು ಉದ್ಯಾನವನದಲ್ಲಿ ನಡೆದ ಘಟನೆಗಳನ್ನು ಹೇಳಿ "ಜಗಜ್ಜನಕನಾದ ಶ್ರೀನಿವಾಸನನ್ನು ಕಂಡು ನಿನ್ನ ಮಗಳು ಮೋಹಿತಳಾಗಿದ್ದಾಳೆ. ಅವನಿಗೆ ಮಗಳನ್ನು ಕೊಟ್ಟು ವಿವಾಹ ಮಾಡಿದರೆ ಬದುಕುತ್ತಾಳೆ. ಇಲ್ಲದಿದ್ದರೆ, ಇನ್ನು ಮೂರು ದಿನಗಳಲ್ಲಿ ಮೃತಳಾಗುತ್ತಾಳೆ" ಎಂದು ಭವಿಷ್ಯ ನುಡಿಯಲು ದುಃಖಿತಳಾದ ರಾಣಿಯು 'ಕನ್ಯೆಯನ್ನು ಕೇಳದೇ ನಾವಾಗಿಯೇ ಹೇಗೆ ಮುಂದುವರಿಯುವುದು ?' ಎಂದು ಪ್ರಶ್ನಿಸಲು ಕೊರವಂಜಿ-ರೂಪದ ಶ್ರೀನಿವಾಸನು 'ನನ್ನ ಮಾತು ಸತ್ಯ. ಇದಕ್ಕೆ ದೃಷ್ಟಾಂತವಾಗಿ

ಇನ್ನು ಸ್ವಲ್ಪ ಹೊತ್ತಿಗೆ ಕನ್ಯಾವನ್ನು ಯಾಚಿಸಲು ಓರ್ವ ವೃದ್ಧಳು ಬರುತ್ತಾಳೆ. ಶ್ರೀನಿವಾಸನಿಗೆ ಮಗಳನ್ನು ಕೊಟ್ಟು ಲಗ್ನಮಾಡು, ಮಂಗಳವಾಗುತ್ತದೆ' ಎಂದು ಹೇಳಿ ಆಕಾಶರಾಜನನ್ನು ಕರೆಯಿಸಿ ಅವನಿಂದ ವಾಙ್‌ನಿಶ್ಚಯಮಾಡಿಸಿ ಸಂತೋಷದಿಂದ ಶೇಷಾಚಲಕ್ಕೆ ಹಿಂದಿರುಗಿದನು.

ಅದೇ ಸಮಯಕ್ಕೆ ರುದ್ರಾಭಿಷೇಕ ಮುಗಿಸಿ ಪ್ರಸಾದ-ದೊಡನೆ ಪುರೋಹಿತಾದಿಗಳು ರಾಜಧಾನಿಗೆ ಹಿಂದಿರುಗಿದ್ದರು. ಅಗಸ್ತ್ಯೇಶ್ವರನಲ್ಲಿ ರುದ್ರಾಭಿಷೇಕವಾಗುವಾಗ ಅಂತಃಪುರಸ್ತ್ರೀಯ-ರೊಡನೆ ಕಲೆತ ಬಕುಳಾದೇವಿಯು ಅವರೊಡನೆ ಅರಮನೆಗೆ ಬಂದು ಪದ್ಮಾವತಿಯನ್ನು ಶ್ರೀನಿವಾಸನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಕೇಳಿದಳು. ಆಗ ಧರಣಿದೇವಿಯು ಏಕಾಂತದಲ್ಲಿ ಪದ್ಮಾವತಿಯನ್ನು ಪ್ರಶ್ನಿಸಿ ಅವಳೂ ಶ್ರೀನಿವಾಸನನ್ನೇ ಮದುವೆ-ಯಾಗಬೇಕೆಂದು ಇಚ್ಛಿಸಿರುವುದನ್ನು ಅರಿತು ಹರ್ಷದಿಂದ ಪತಿ-ಯನ್ನು ಕರೆದು ಬಕುಳಮಾಲಿಕೆಯು ಕನ್ಯಾರ್ಥಿಯಾಗಿ ಬಂದ ವಿಚಾರ ಪದ್ಮಾವತಿಯೂ ಶ್ರೀನಿವಾಸನನ್ನೇ ವರಿಸಲು ಆಶಿಸಿರುವ ವಿಚಾರಗಳನ್ನು ಹೇಳಿ ಬಕುಳಮಾಲಿಕೆಯನ್ನು ಪೂಜಿಸಿ ಕನ್ಯಾ ನೀಡುವುದಾಗಿ ಹೇಳಿ, ರಾಜಸಭೆ ಸೇರಿಸಿ ವಿವಾಹ ನಿಶ್ಚಯಿಸುವಂತೆ ಆಕಾಶರಾಜನಿಗೆ ಹೇಳಿದಳು. ರಾಜನು ಸಂತುಷ್ಟನಾಗಿ ದೇವಗುರು ಬೃಹಸ್ಪತ್ಯಾಚಾರ್ಯರನ್ನೂ ಶುಕಾಚಾರ್ಯರನ್ನು ಕರೆಸಿ ವಧೂವರರ ಜಾತಕನೋಡಿಸಿ ಗುರು ಹಿರಿಯರ ಅಪ್ಪಣೆ ಪಡೆದು ಶ್ರೀನಿವಾಸನಿಗೆ ಪದ್ಮಾವತಿಯನ್ನು ಕೊಟ್ಟು ವಿವಾಹಮಾಡುವುದಾಗಿ ಸಭೆಯಲ್ಲಿ ಘೋಷಿಸಿ ಬೃಹಸ್ಪತ್ಯಾಚಾರ್ಯರು ಹೇಳಿದಂತೆ ಶ್ರೀನಿವಾಸನಿಗೆ ವಿಳಂಬಿ ಸಂವತ್ಸರ ವೈಶಾಖ ಶುಕ್ಲ ದಶಮಿ ಶುಕ್ರವಾರದ ದಿನ ಪದ್ಮಾವತಿ-ಯನ್ನು ಶ್ರೀನಿವಾಸನಿಗೆ ಕೊಟ್ಟು ವಿವಾಹ ಮಾಡುವುದಾಗಿ

ಲಗ್ನಪತ್ರಿಕೆ ಬರೆದು ಶುಕಾಚಾರ್ಯರ ಜತೆಗೆ ಕಳಿಸಿದನು. ಶುಕಾ- ಚಾರ್ಯರು. ಆನಂದದಿಂದ ಶೇಷಾಚಲಕ್ಕೆ ಬಂದು ಶ್ರೀನಿವಾಸನಿಗೆ ಲಗ್ನಪತ್ರಿಕೆಯನ್ನು ತಲುಪಿಸಿ ಶ್ರೀನಿವಾಸನಿಂದ ಆಕಾಶರಾಜನಿಗೆ ಪತ್ರ ಬರೆಯಿಸಿ ಲಗ್ನಪತ್ರಿಕೆಯನ್ನು ತೆಗೆದುಕೊಂಡು ನಾರಾಯಣ- ಪುರಕ್ಕೆ ಮರಳಿದರು.

ಸ್ವಲ್ಪಕಾಲದ ಮೇಲೆ ವಿಚಾರವರಿತು ಶ್ರೀನಿವಾಸನು ಶುಕಾ- ಚಾರ್ಯರು ಲಗ್ನಪತ್ರಿಕೆಯನ್ನು ತಂದುಕೊಟ್ಟು ಹೋದ ವಿಚಾರವನ್ನು ತಿಳಿಸಿ ಸಂತೋಷದಿಂದ ಬಕುಳಾದೇವಿಯನ್ನು ಶ್ಲಾಘಿಸಿ ನಂತರ ಅವಳ ಪ್ರಾರ್ಥನೆಯಂತೆ ಬ್ರಹ್ಮರುದ್ರಾದಿದೇವತೆಗಳಿಗೆ ಪತ್ರ ಬರೆದು ತನ್ನ ವಿವಾಹಕ್ಕೆ ಬರಲು ಆಜ್ಞಾಪಿಸಿ, ಗರುಡಶೇಷರ ದ್ವಾರಾ ಕಳಿಸಿಕೊಟ್ಟನು. ಬ್ರಹ್ಮದೇವರು ತ[illegible]ು ಬರೆದ ಪತ್ರ- ವನ್ನು ವಾಯುದೇವರಿಂದ ಓದಿಸಿ ಕೇಳಿ ಆನಂದಪಟ್ಟು ಸಾವಿತ್ರೀ, ಗಾಯಿತ್ರೀ ಸರಸ್ವತೀದೇವಿಯರೊಡನೆ ಸೈನ್ಯ ಮತ್ತು ಸಕಲ ಪರಿವಾರಸಹಿತರಾಗಿ ಶೇಷಾಚಲಕ್ಕೆ ವಿಜಯ ಮಾಡಿಸಿದರು. ಅದೇ ಕಾಲಕ್ಕೆ ರುದ್ರದೇವರು ಪಾರ್ವತೀಸಹಿತರಾಗಿ, ವಾಯುದೇವರು ಭಾರತೀ ಸಹಿತರಾಗಿ, ಇಂದ್ರಾದಿಗಳು ಅವರವರ ಪತ್ನಿಯರೊಡನೆ ಬಂದು ಸೇರಿದರು. ಶ್ರೀನಿವಾಸದೇವರು ಬ್ರಹ್ಮದೇವರನ್ನಾಲಿಂಗಿಸಿ ಕುಶಲ ಪ್ರಶ್ನೆ ಮಾಡಿ ಆನಂತರ ಸರ್ವದೇವತೆಗಳ ಯೋಗಕ್ಷೇಮ ವಿಚಾರಿಸಿ ಸರ್ವರನ್ನೂ ಕೂಡಿಸಿಕೊಂಡು ತಮ್ಮ ಶೇಷಾಚಲಗಮನ ಕಾರಣ, ಪದ್ಮಾವತಿ ವಿವಾಹ ಮುಂತಾದವುಗಳನ್ನು ನಿರೂಪಿಸಿ ಸರ್ವರನ್ನೂ ಆನಂದಗೊಳಿಸಿದರು. ಆಮೇಲೆ ವಿಶ್ವಕರ್ಮನ ಮೇಲೆ ಸಿಟ್ಟಾದಂತೆ ನಟಿಸಿ ಅನಂತರ ಅನುಗ್ರಹಿಸಿ ಇಂದ್ರದೇವರ ಮೂಲಕ ವಿಶ್ವಕರ್ಮನಿಂದ ನಾರಾಯಣಪುರದಲ್ಲಿ ತಾವುಗಳು ಇಳಿಯಲು ಸೌಧಗಳನ್ನು ಶ್ರೇಷ್ಠ ಕಲ್ಯಾಣ ಮಂಟಪವನ್ನು

ನಿರ್ಮಾಣ ಮಾಡಿಸಿದರು. ವಿವಾಹಾಂಗವಾಗಿ ಪುಣ್ಯಾಹ, ಅಷ್ಟವರ್ಗ, ನಾಂದೀ ಮುಂತಾದ ಶುಭಕಾರ್ಯಗಳನ್ನು ನಡೆಯ-ಲಿರುವಾಗ ಶ್ರೀನಿವಾಸದೇವರು ಲಕ್ಷ್ಮೀದೇವಿಯನ್ನು ನೆನೆದು ದುಃಖವನ್ನು ನಟಿಸಿ ಸೂರ್ಯನ ಮೂಲಕ ರಮಾದೇವಿಯನ್ನು ಕೊಲ್ಹಾಪುರದಿಂದ ಕರೆಯಿಸಿಕೊಂಡು ತ್ರೇತಾಯುಗದಲ್ಲಿ ವೇದವತಿಯನ್ನು ಲಗ್ನವಾಗಬೇಕೆಂದು ಲಕ್ಷ್ಮೀಸ್ವರೂಪಿಣಿಯಾದ ಸೀತಾದೇವಿ ಪ್ರಾರ್ಥಿಸಿದಾಗ ದ್ವಾಪರಾಂತ್ಯದಲ್ಲಿ ಲಗ್ನವಾಗುವು-ದಾಗಿ ರಾಮನಾಗಿದ್ದ ತಾನು ಅಭಯವಿತ್ತ ವಿಚಾರ, ಆ ವೇದವತಿಯೇ ಪದ್ಮಾವತಿಯಾಗಿ ಅವತರಿಸಿರುವುದು, ಈಗ ಅವಳ ವಿವಾಹವಾಗಲಿರುವ ಸಮಾಚಾರಗಳನ್ನು ಲಕ್ಷ್ಮೀದೇವಿಗೆ ನೆನಪಿಗೆ ತಂದು 'ದೇವಿ ! ಈಗ ನೀನೇ ನಿಂತು ಈ ಶುಭಕಾರ್ಯ ಮಾಡಿಸಬೇಕು' ಎಂದು ಹೇಳಲು ಲಕ್ಷ್ಮೀದೇವಿಯು ಸಂತಸದಿಂದ ಸಮ್ಮತಿಸಿ ಶ್ರೀನಿವಾಸನಿಗೆ ಮಂಗಳಸ್ನಾನಮಾಡಿಸಿ, ಕುಬೇರನಿಂದ ವಸ್ತ್ರ, ಆಭರಣಗಳನ್ನು ಪಡೆದು ಶ್ರೀಶನನ್ನು ಅಲಂಕರಿಸಿದಳು. ಅನಂತರ ಪುಣ್ಯಾಹಾದಿ ಶುಭಕಾರ್ಯಗಳು ಜರುಗಿದವು. ಲಗ್ನದ ಖರ್ಚಿಗೆ ಶ್ರೀನಿವಾಸನು ಕುಬೇರನಿಂದ ಹದಿನಾಲ್ಕು ಲಕ್ಷ ರಾಮಟಂಕಾ ವರಹಗಳನ್ನು ಸಾಲವಾಗಿ ಪಡೆದು ಅದನ್ನು ವೆಚ್ಚ ಮಾಡಲು ಅವನಲ್ಲಿಯೇ ಕೊಟ್ಟು ವಿವಾಹಕ್ಕೆ ಬೇಕಾದ ದಿನಸಿ, ವಸ್ತ್ರ, ಹಣ್ಣು, ಹೂವು, ಸುವಾಸನೆ ದ್ರವ್ಯ, ಮಾಂಗಲ್ಯಾದಿ ಸಮಸ್ತ ಸಾಮಗ್ರಿಗಳನ್ನೂ ಸಿದ್ಧಪಡಿಸಲು ಆಜ್ಞಾಪಿಸಿದನು. ಅದರಂತೆ ಸರ್ವವೂ ಸಿದ್ಧವಾಯಿತು. ನಂತರ ಅಗ್ನಿದೇವನಿಂದ ಅಡಿಗೆಯನ್ನು ಮಾಡಿಸಿ ದೇವರಿಗೆ ನಿವೇದನ ಮಾಡಿಸಿ, ತಾರತಮ್ಯಾನುಸಾರ ದೇವತೆಗಳು, ಋಷಿಮುನಿಗಳನ್ನು ಸಾಲಾಗಿ ಕೂಡಿಸಿ ಸಕಲ ಪದಾರ್ಥಗಳನ್ನು ಎಲೆಯಲ್ಲಿ ಬಡಿಸಿಸಿ, ಶ್ರೀನೃಸಿಂಹಾರ್ಪಣಮಸ್ತು

ಎಂದು ಹೇಳಿ ಭೋಜನ ಮಾಡಿಸಿದನು. ಅನಂತರ ಲಕ್ಷ್ಮಿ, ಬಕುಳಾದೇವಿ, ಬ್ರಹ್ಮಾದಿಗಳು ತಾನು ಕುಳಿತು ಭೋಜನ ಮಾಡಿ ಆನಂದದಿಂದ ಅಂದು ಅಲ್ಲಿಯೇ ವಿಶ್ರಮಿಸಿದನು.

ಮರುದಿನ ನವಮೀಪ್ರಾತಃಕಾಲ ಶ್ರೀಬ್ರಹ್ಮದೇವರು ಶ್ರೀನಿವಾಸದೇವರ ಅಪ್ಪಣೆಯಂತೆ ಸಮಸ್ತ ಸೈನ್ಯಕ್ಕೂ ಆಕಾಶರಾಜನ ಪಟ್ಟಣಕ್ಕೆ ಹೊರಡಲು ಅಪ್ಪಣೆಮಾಡಿ ಸರ್ವರೊಡನೆ ಹೊರಟರು. ಕಶ್ಯಪಾದಿ ನಿಖಿಲಋಷಿಗಳೂ, ಸಜ್ಜನರೂ, ದೇವತೆಗಳೂ ಶ್ರೀನಿವಾಸನ ಕಲ್ಯಾಣಮಹೋತ್ಸವವನ್ನು ನೋಡಬೇಕೆಂಬ ಆಕಾಂಕ್ಷೆಯಿಂದ ಹೊರಟರು. ಗಂಧರ್ವಾದಿಗಳು ಶ್ರೀಹರಿಯ ದಶಾವತಾರಾದಿ ಲೀಲೆಗಳನ್ನು ಸುಶ್ರಾವ್ಯವಾಗಿ ಹಾಡಹತ್ತಿದರು. ವಂದಿಮಾಗಧರು ಬಿರುದಾವಳಿಗಳನ್ನು ಹೊಗಳಹತ್ತಿದರು. ರಂಭಾದಿ ಅಪ್ಸರಾಸ್ತ್ರೀಯರು ನರ್ತನ ಮಾಡುತ್ತಿದ್ದರೆ, ಬ್ರಾಹ್ಮಣರು ಸುಸ್ವರವಾಗಿ ವೇದಘೋಷ ಮಾಡುತ್ತಿದ್ದರು. ಸುಮಂಗಲಿಯರು ಮಂಗಳಗೀತೆಗಳನ್ನು ಹಾಡಹತ್ತಿದರು. ವಾದ್ಯಗಳು, ದೇವದುಂದುಭಿಗಳು ಮೊಳಗಿದವು. ಇಂತು ಮಹಾವೈಭವದಿಂದ ಶ್ರೀನಿವಾಸನ ಪರಿಣಯದ ದಿಬ್ಬಣವು ಸಂಭ್ರಮದಿಂದ ಹೊರಟು ಶುಕಮುನಿಗಳ ಆಶ್ರಮಕ್ಕೆ ಬಂದಿತು. ಅಲ್ಲಿ ಶುಕಾಚಾರ್ಯರ ಪ್ರಾರ್ಥನೆಯಂತೆ ಲಕ್ಷ್ಮೀದೇವಿ, ಬಕುಳಾದೇವಿ ಸಹಿತನಾಗಿ ಶ್ರೀನಿವಾಸನು ಶುಕಾಚಾರ್ಯರು ನೀಡಿದ ಸಾತ್ವಿಕ ಭೋಜನವನ್ನು ಮಾಡಿದನು. ಆಗ ತಮ್ಮನ್ನು ಬಿಟ್ಟು ಶ್ರೀನಿವಾಸನಿಗೆ ಮಾತ್ರ ಭೋಜನಮಾಡಿಸಿದರೆಂದು ಋಷಿಮುನಿಗಳು ಶುಕಾಚಾರ್ಯರ ಮೇಲೆ ಕುಪಿತರಾದುದನ್ನು ಕಂಡು ಶ್ರೀನಿವಾಸನು ಆಶ್ರಮದಿಂದ ಹೊರ ಬಂದು ಒಮ್ಮೆ ತೇಗಿದನು. ಅದರಿಂದ ಸರ್ವರಿಗೂ ಮೃಷ್ಟಾನ್ನ ಭೋಜನ ಮಾಡಿದಷ್ಟು ತೃಪ್ತಿ-ಆನಂದಗಳುಂಟಾಗಿ

ಎಲ್ಲರೂ ಶುಕಮುನಿಗಳನ್ನು ಸ್ತೋತ್ರ ಮಾಡಿದರು. ಅನಂತರ ಶುಕಾಚಾರ್ಯರಿಂದ ಬೀಳ್ಕೊಂಡು ಮದುವೆಯ ದಿಬ್ಬಣವು ನಾರಾಯಣಪುರದತ್ತ ಪಯಣ ಬೆಳೆಸಿತು.

ಅತ್ತ ಆಕಾಶರಾಜನ ಪಟ್ಟಣದಲ್ಲಿ ಮಹಾರಾಜ, ಧರಣೀದೇವಿ, ಪದ್ಮಾವತೀದೇವಿಯೇ ಮುಂತಾದವರು ಮಂಗಳಸ್ನಾನ ಮಾಡಿ ಪೀತಾಂಬರ ಧರಿಸಿ, ಪುಣ್ಯಾಹ, ನಾಂದೀ, ಅಷ್ಟವರ್ಗ, ಕುಲದೇವತಾಪ್ರತಿಷ್ಠಾದಿ ಶುಭಕಾರ್ಯಗಳನ್ನು ನೆರವೇರಿಸಿ ಸಾಯಂಕಾಲ ಶ್ರೀನಿವಾಸದೇವರು ಮತ್ತು ಬೀಗರುಗಳನ್ನು ಎದುರುಗೊಳ್ಳಲು ಸಕಲಸಿದ್ಧತೆಗಳನ್ನು ಮಾಡಿಕೊಂಡರು. ಪಟ್ಟದಾನೆಯನ್ನು ವಿವಿಧಾಭರಣವಸ್ತ್ರಾದಿಗಳಿಂದ ಶೃಂಗರಿಸಿದರು. ಅದೇ ಸಮಯಕ್ಕೆ ಸಕಲ ದೇವತೆಗಳೊಡನೆ ಶ್ರೀನಿವಾಸದೇವರು ದಯಮಾಡಿಸಲು ಅವರನ್ನು ಗೌರವಾದರಗಳಿಂದ ಸ್ವಾಗತಿಸಿ, ರಾಜರಾಣಿಯರು ವರನನ್ನು, ಸಂಭ್ರಮದಿಂದ ಪೂಜಿಸಿ ಶ್ರೀನಿವಾಸನನ್ನು ಆನೆಯ ಮೇಲೆ ಅಂಬಾರಿಯಲ್ಲಿ ಕೂಡಿಸಿ ಮೆರವಣಿಗೆ ಹೊರಡಿಸಿದರು. ಶ್ರೀನಿವಾಸ-ಪದ್ಮಾವತಿಯರು ನಗರದ ಹೊರವಲಯದಲ್ಲಿರುವ ಶ್ರೀ ದುರ್ಗಾದೇವಿಯ ಗುಡಿಗೆ ಹೋಗಿ ಪ್ರಾರ್ಥಿಸಿದರು. ಆಗ ಆಕಾಶರಾಜನು ಆನಂದಭರಿತನಾಗಿ ರಾಜಬೀದಿಗಳಲ್ಲಿ ವರನ ಮೆರವಣಿಗೆಯನ್ನು ವಿಜೃಂಭಣೆಯಿಂದ ನೆರವೇರಿಸಿ ವರನಿಗಾಗಿ ಸಿದ್ಧಪಡಿಸಿದ್ದ ಬಿಡಾರಕ್ಕೆ ಕರೆತಂದು ಇಳಿಯಿಸಿದನು. ಅಂದು ರಾತ್ರಿ ವೈಭವದಿಂದ ರುಕ್ಕೋತ, ಬಿಸಿಲೂಟಗಳಾದವು. ಶ್ರೀನಿವಾಸಾದಿಗಳಿಗೆ ಬಿಡಾರದಲ್ಲೇ ದಿವ್ಯಭೋಜನ ಮಾಡಿಸಿದರು. ಇತರ ದೇವತೆಗಳು ಮುಂತಾದವರಿಗೆ ಮೃಷ್ಟಾನ್ನ ಭೋಜನವಾಯಿತು. ಅಂದು ರಾತ್ರಿ ಶ್ರೀನಿವಾಸನು ಮಾನವನಂತೆ ನಟಿಸುತ್ತಾ ಯೋಗನಿದ್ರಾಪರವಶನಾದನು.

ಮರುದಿನ ವೈಶಾಖ ಶುದ್ಧ ದಶಮೀ ಶುಕ್ರವಾರದ ದಿವಸ ಆಕಾಶರಾಜನು ಪತ್ನೀ ಪುತ್ರೀ ಮುಂತಾದವರೊಡನೆ ಮಂಗಳ ಸ್ನಾನ ಮಾಡಿ ಪೀತಾಂಬರ, ಆಭರಣಾದಿಗಳಿಂದ ಅಲಂಕೃತರಾಗಿ ಐರಾವತವನ್ನು ಸಕಲಾಭರಣಗಳಿಂದ ಅಲಂಕರಿಸಿ ಶ್ರೀನಿವಾಸನನ್ನು ಕಲ್ಯಾಣ ಮಂಟಪಕ್ಕೆ ಕರೆತರಲು ಹೊರಟನು. ಅರುಂಧತೀ-ದೇವಿಯನ್ನು ಮುಂದೆ ಮಾಡಿಕೊಂಡು ಧರಣೀದೇವಿಯು ಪರಿವಾರದವರೊಡನೆ ಪತಿಯೊಡನೆ ಹೊರಟಳು. ಸುವಾಸಿನಿ-ಯರು ಮಂಗಳಗೀತೆಗಳನ್ನು ಹಾಡಿದರು. ವಿಪ್ರರು ವೇದಘೋಷ ಮಾಡಿದರು. ದೇವದುಂದುಭಿಗಳು ಮೊಳಗಿದವು. ಸುಶ್ರಾವ್ಯವಾಗಿ ನಾಗಸ್ವರವನ್ನು ಓಲಗದವರು ಬಾರಿಸಹತ್ತಿದರು. ಬಿರುದು-ಬಾವಲಿಗಳಿಂದ ಸೈನ್ಯಗಳು ಕವಾತು ಮಾಡುತ್ತಾ ಹೊರಟವು. ರಾಜಬೀದಿಯ ಎರಡೂ ಪಾರ್ಶ್ವಗಳಲ್ಲಿ ನಿಂತ ಜನರು ಮೆರ-ವಣಿಗೆಯಲ್ಲಿ ಬರುತ್ತಿದ್ದ ಶ್ರೀನಿವಾಸನ ಮೇಲೆ ಲಾಜಾಪುಷ್ಪಗಳನ್ನು ವರ್ಷಿಸಿದರು. ಐರಾವತದಲ್ಲಿ ಮಂಡಿಸಿದ್ದ ಶ್ರೀನಿವಾಸನು ನಗೆ-ಮೊಗದಿಂದ ಕಲ್ಯಾಣಮಂಟಪಕ್ಕೆ ತೆರಳಿದನು. ಆ ಒಂದು ಭವ್ಯ ದಿವ್ಯ ದೃಶ್ಯವನ್ನು ನೋಡಲು ಎರಡು ಕಣ್ಣುಗಳೂ ಸಾಲದೆಂದು ಜನರು ಅದನ್ನು ಕಂಡು ತಾವೇ ಧನ್ಯರೆಂದು ಭಾವಿಸಹತ್ತಿದರು. ಕಲ್ಯಾಣಮಂಟಪದಲ್ಲಿ ವರನಿಗೆ ಪಾದ್ಯ, ಅರ್ಘ್ಯ, ಮಧುಪರ್ಕ, ಮುಂತಾದ ಪೂಜೆಗಳಾದ ಮೇಲೆ ಶ್ರೀನಿವಾಸನನ್ನು ವಿವಾಹ-ಮಂಟಪದಲ್ಲಿ ಮಂಡಿಸಿದರು. ಸಮಸ್ತ ದೇವತೆಗಳು, ಋಷಿ-ಮುನಿಗಳು, ರಾಜರು, ಧರ್ಮಾಭಿಮಾನಿ ಪ್ರಜೆಗಳು ತಾರತಮ್ಯಾ-ನುಸಾರ ಕಲ್ಯಾಣಮಂಟಪದಲ್ಲಿ ಕಿಕ್ಕಿರಿದು ತುಂಬಿದ್ದರು. ಕನ್ಯಾ-ವರಪ್ರವರೋಚ್ಚಾರವಾದ ಮೇಲೆ ಮಹಾಸಂಕಲ್ಪವಾಯಿತು. ಆ ಸಂಭ್ರಮದ ದೃಶ್ಯವನ್ನು ಕಂಡು, ಸಾಕ್ಷಾತ್ ಜಗದೀಶನಿಗೆ ಕನ್ಯಾ-ದಾನ ಮಾಡುವ ತಮ್ಮ ಮಹಾಭಾಗ್ಯವನ್ನು ನೆನೆದು ರಾಜ-

ರಾಣಿಯರು ಆನಂದಬಾಷ್ಪ ಸುರಿಸಿ ರೋಮಾಂಚನಗೊಂಡರು. ವಿಪ್ರರು ವೇದಘೋಷ ಮಾಡುತ್ತಿರಲು ಕಂಕಣ ಬಂಧನ, ಮಾಂಗಲ್ಯ ಬಂಧನಾದಿ ವೈವಾಹಿಕ ಮಂಗಳಗಳು ಜರುಗಿದವು. ಆಗ ಶ್ರೀನಿವಾಸದೇವರು ಪದ್ಮಾವತಿಗೆ "ಮಾಂಗಲ್ಯಂ ತಂತು-ನಾನೇನ ಜಗಜ್ಜೀವನಹೇತುನಾ । ಕಂಠೇ ಬಧ್ನಾಮಿ ಸುಭಗೆ ಚಿರಂ ಜೀವ ಮಯಾ ಸಹ" "ಶುಭಕರಳೇ, ಸಕಲ ಜಗತ್ತು ಚಿರಕಾಲ ಸುಖದಿಂದ ಜೀವಿಸಲು ನಾನು ನಿನಗೆ ಈ ಮಂಗಳಸೂತ್ರವನ್ನು ಕಟ್ಟುತ್ತೇನೆ. ನನ್ನೊಡನೆ ನೀನು ಚಿರಕಾಲ ಸುಖದಿಂದಿರು" ಎಂದು ಹೇಳಿ ಪದ್ಮಾವತಿಯ ಕಂಠದಲ್ಲಿ ಮಂಗಳಸೂತ್ರವನ್ನು ಕಟ್ಟಿದನು. ಆಕಾಶರಾಜನು ಅಳಿಯನಿಗೆ ಭಂಗಾರದ ಕಿರೀಟ, ಬಾಹುಬಂಧನ, ಕಂಠಾಭರಣ, ನಡುಪಟ್ಟಿ, ಉಂಗುರಾದಿ ಅನೇಕ ಆಭರಣಗಳನ್ನೂ ಜರತಾರಿ ಪೀತಾಂಬರ ವಸ್ತ್ರಾದಿಗಳನ್ನೂ, ರಜತಪಾತ್ರೆಗಳನ್ನೂ, ಸಂಸಾರಕ್ಕೆ ಬೇಕಾಗುವ ಸಕಲ ಪಾತ್ರೆ ಪದಾರ್ಥಗಳನ್ನೂ, ಧನ-ರಾಶಿಯನ್ನು ನೀಡಿ ಉಪಚರಿಸಿದನು. ಹೀಗೆ ನಾಲ್ಕು ದಿನ ಪರ್ಯಂತರ ಶ್ರೀ ಶ್ರೀನಿವಾಸನ ಕಲ್ಯಾಣಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಸಮಸ್ತರೂ ಅದನ್ನು ಕಂಡು ಸಂತೋಷಭರಿತರಾದರು. ಶ್ರೀಶ್ರೀನಿವಾಸದೇವರ ಈ ಕಲ್ಯಾಣ-ಮಹೋತ್ಸವದ ಮಹಿಮೆಯನ್ನು ಹೇಳಿದವರಿಗೆ, ಕೇಳಿದವರಿಗೆ ಶ್ರೀನಿವಾಸನು ಸಕಲವಿಧ ಸನ್ಮಂಗಳಗಳನ್ನು ಕರುಣಿಸುವನು ಎಂಬುದನ್ನು ಶತಾನಂದರು ಜನಕರಾಜನಿಗೂ, ಸೂತರು ಶೌನಕರಿಗೂ ನಿರೂಪಿಸಿದರು ಎಂಬಲ್ಲಿಗೆ ಮಂಗಳಮಸ್ತು.

"ಕಲ್ಯಾಣಾದ್ಭುತಗಾತ್ರಾಯ ಕಾಮಿತಾರ್ಥಪ್ರದಾಯಿನೆ ।
ಶ್ರೀಮದ್ವೇಂಕಟನಾಥಾಯ ಶ್ರೀನಿವಾಸಾಯ ಮಂಗಳಮ್ ॥"

★ ★ ★